# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಮಂಗಳವಾರ, ಆಗಸ್ಟ್ 16, 2022

ಸಂಪುಟ : 49 ಸಂಚಿಕೆ : 94 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com







# ಬಹುಜನರ ಕಲ್ಯಾಣಕ್ಕೆ ಮಹಾಮನೆಯ ಮಂತ್ರ

## ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಸ್ವಾತಂತ್ರ್ಯದ ಅಮೃತ ಮಹೋತ್ಸವದಲ್ಲಿ ಸಚಿವ ಭೈರತಿ ಬಸವರಾಜ್ ಕರೆ

ದಾವಣಗೆರೆ, ಆ. 15 - ಬಹುಜನರ ಒಳಿತು, ಬಹುಜನರ ಕಲ್ಯಾಣಕ್ಕಾಗಿ ಮಹಾಮನೆಯ ಮಂತ್ರವನ್ನು ಸಾರುತ್ತಾ ಭವ್ಯ ಭಾರತ ಕಟ್ಟುವ ಸಂಕಲ್ಪ ಮಾಡಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಕರೆ ನೀಡಿದ್ದಾರೆ.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಅವರು ಸ್ವಾತಂತ್ರ್ಯೋತ್ಸವದ ಸಂದೇಶ ನೀಡಿದರು.

1997ರಲ್ಲಿ ದಾವಣಗೆರೆ ನೂತನ ಜಿಲ್ಲೆಯಾಗಿ ಉದಯಿಸಿದೆ. ಹೀಗಾಗಿ ಇದು ಸ್ವಾತಂತ್ರ್ಯ ಅಮೃತ ಮಹೋತ್ಸವದ ಜೊತೆಗೆ, ಜಿಲ್ಲೆಗೆ ಬೆಳ್ಳಿ ಹಬ್ಬದ ಸಂಭ್ರಮವಾಗಿದೆ. ಈ ಸಂದರ್ಭದಲ್ಲಿ ಜಿಲ್ಲೆಯ ಉದಯಕ್ಕೆ ಕಾರಣರಾದ ಮಾಜಿ ಮುಖ್ಯಮಂತ್ರಿ ದಿ. ಜೆ.ಹೆಚ್. ಪಟೇಲರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯ ಎಂದರು.

ದಾವಣಗೆರೆಯು ರಾಜ್ಯದ 6ನೇ ಸಂಪದ್ಭರಿತ ಜಿಲ್ಲೆಯಾಗಿದೆ. ಜವಳಿ, ಪ್ರವಾಸೋದ್ಯಮ ಹಾಗೂ ಪ್ರೇಕ್ಷಣೀಯ ಸ್ಥಳಗಳು ಇಲ್ಲಿವೆ. ಹರಿಹರೇಶ್ವರ, ಕರಿಬಸವೇಶ್ವರ, ಸಂತೇಬೆನ್ನೂರು ಪುಷ್ಕರಣಿ, ಗಾಜಿನ ಮನೆ, ಕೊಂಡಜ್ಜಿಯ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರ ಹಾಗೂ ಏಷಿಯಾದ ಎರಡನೇ ಅತಿ ದೊಡ್ಡ ಕೆರೆಯಾದ ಶಾಂತಿಸಾಗರ ಇಲ್ಲಿವೆ ಎಂದು ಹೇಳಿದರು.

1942ರಲ್ಲಿ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ದಾವಣಗೆರೆಯಲ್ಲಿ ನಡೆದ ಹೋರಾಟದಲ್ಲಿ ನಗರದ ಹಳ್ಳೂರು ನಾಗಪ್ಪ, ಅಕ್ಕಸಾಲಿ ವಿರೂಪಾಕ್ಷಪ್ಪ, ಬಿದಿರಕುಂದಿ ನಿಂಗಪ್ಪ, ಹಮಾಲಿ ತಿಮ್ಮಣ್ಣ, ಹದಡಿ ನಿಂಗಪ್ಪ ಹಾಗೂ ಮಾಗಾನಹಳ್ಳಿ ಹನುಮಂತಪ್ಪ ಅವರು ಬ್ರಿಟಿಷರ ಗುಂಡಿಗೆ ಹುತಾತ್ಮರಾಗಿದ್ದರು. ಅವರನ್ನು ನಾವು ನೆನಪಿಸಿಕೊಳ್ಳಬೇಕಿದೆ ಎಂದು ಸಚಿವರು ಹೇಳಿದರು.

ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಝಾನ್ಸಿರಾಣಿ ಲಕ್ಷ್ಮೀಬಾಯಿ, ಮಂಗಲ್ ಪಾಂಡೆ, ನಾನಾ ಸಾಹೇಬ್ ಅವರು 18ನೇ ಶತಮಾನದಲ್ಲಿ ಸ್ವಾತಂತ್ರ್ಯ ಹೋರಾಟದ ಕಿಡಿ ಹಚ್ಚಿಸಿದರು. ನಂತರ ಗೋಪಾಲಕೃಷ್ಣ ಗೋಖಲೆ, ಮಹಾತ್ಮ (2ನೇ ಪುಟಕ್ಕೆ)

### ದೇಶಭಕ್ತಿ ಮೆರೆದ ಮಕ್ಕಳ ನೃತ್ಯ ರೂಪಕಗಳು




ದಾವಣಗೆರೆ, ಆ. 15 - ಸ್ವಾತಂತ್ರ್ಯದ 75ನೇ ವರ್ಷದ ಅಮೃತ ಮಹೋತ್ಸವದ ಅಂಗವಾಗಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ವಿವಿಧ ಶಾಲೆಯ ಮಕ್ಕಳು ಪ್ರದರ್ಶಿಸಿದ ನೃತ್ಯ ರೂಪಕಗಳು ಪ್ರೇಕ್ಷಕರಲ್ಲಿ ರಾಷ್ಟ್ರಭಕ್ತಿ ತುಂಬಿ ಮೆಚ್ಚುಗೆ ಪಡೆದವು. ಸಿದ್ದಗಂಗಾ ಶಾಲೆಯ 2 ಸಾವಿರ ವಿದ್ಯಾರ್ಥಿಗಳು ತುಂತುರು ಮಳೆಯ ನಡುವೆ ರಾಷ್ಟ್ರದ ಹಿರಿಮೆ ಸಾರುವ ರೂಪಕ ಪ್ರದರ್ಶಿಸಿದರು. ಕಾರ್ಗಿಲ್ ಮೇಲೆ ಪಾಕಿಸ್ತಾನ ದಾಳಿ ನಡೆಸಿದಾಗ ಭಾರತದ ಸೈನಿಕರು ಹಿಮ್ಮೆಟ್ಟಿಸಿದ ಹಾಗೂ (3ನೇ ಪುಟಕ್ಕೆ)

### 22 ತಂಡಗಳ ಪಥ ಸಂಚಲನ

**ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ 22 ತಂಡಗಳಿಂದ ಆಕರ್ಷಕ ಪಥ ಸಂಚಲನ ನೆರವೇರಿತು. ಪಥಸಂಚಲನದಲ್ಲಿ ಸಮವಸ್ತ್ರ ವಿಭಾಗದಲ್ಲಿ ಹೋಂ ಗಾರ್ಡ್ ಪ್ರಥಮ, ಅಬಕಾರಿ ತಂಡ ದ್ವಿತೀಯ ಹಾಗೂ ಅಗ್ನಿಶಾಮಕ ದಳ ತೃತೀಯ ಸ್ಥಾನ ಪಡೆದವು. ಎನ್.ಸಿ.ಸಿ. ವಿಭಾಗದಲ್ಲಿ ಜಿ.ಎಂ.ಐ.ಟಿ. ಕಾಲೇಜು ಪ್ರಥಮ, ಡಿ.ಆರ್.ಎಂ. ಶಾಲೆ ದ್ವಿತೀಯ ಹಾಗೂ ಎ.ವಿ.ಕೆ. ಕಾಲೇಜು ತೃತೀಯ ಸ್ಥಾನ ಪಡೆದಿವೆ. ಹೈಸ್ಕೂಲ್ - ಕಾಲೇಜು ವಿಭಾಗದಲ್ಲಿ ಸಿದ್ದಗಂಗಾ ಕಾಲೇಜು ಪ್ರಥಮ, ಪುಷ್ಪ ಮಹಲಿಂಗಪ್ಪ ಕಾಲೇಜು ದ್ವಿತೀಯ ಹಾಗೂ ನಿಟುವಳ್ಳಿಯ ಆರ್. ಎಂ.ಎಸ್.ಇ. ಶಾಲೆ ತೃತೀಯ ಸ್ಥಾನ ಪಡೆದಿವೆ. ಪ್ರಾಥಮಿಕ ಶಾಲೆ ವಿಭಾಗದಲ್ಲಿ ಮೌನೇಶ್ವರ ಶಾಲೆ ಪ್ರಥಮ, ಎಸ್.ಟಿ.ಜೆ. ಶಾಲೆ ದ್ವಿತೀಯ ಹಾಗೂ ಸರ್ಟಿಫೈಡ್ ಶಾಲೆ ತೃತೀಯ ಸ್ಥಾನ ಪಡೆದಿವೆ.**

## ಜಮೀನು ವಶ: ರೈತರ ಜೊತೆ ಚರ್ಚೆ : ಭೈರತಿ

ದಾವಣಗೆರೆ, ಆ. 15 - ಕೈಗಾರಿಕಾ ಕಾರಿಡಾರ್ ಸ್ಥಾಪನೆಗೆ ತಮ್ಮ ಜಮೀನು ವಶಪಡಿಸಿಕೊಳ್ಳುವುದನ್ನು ವಿರೋಧಿಸಿ ಪ್ರತಿಭಟನೆ ಮಾಡುತ್ತಿರುವ ಮೆಳ್ಳೇಕಟ್ಟೆ, ಅಣಜಿ ಹಾಗೂ ಲಿಂಗಾಪುರ ಭಾಗದ ರೈತರ ಜೊತೆ ಚರ್ಚಿಸುತ್ತೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಪ್ರತಿಭಟನೆ ನಡೆಸುತ್ತಿರುವ ರೈತರ ಜೊತೆ ವೈಯಕ್ತಿಕವಾಗಿ ಮಾತನಾಡುವುದಾಗಿ ಹೇಳಿದರು. ಕೈಗಾರಿಕಾ ಕಾರಿಡಾರ್‌ಗಾಗಿ ಜಮೀನು ವಶಪಡಿಸಿಕೊಳ್ಳಲು ಕೆ.ಐ.ಎ.ಡಿ.ಬಿ. ಮೂಲಕ ನೋಟಿಸ್ ಕಳಿಸಿರುವುದನ್ನು ವಿರೋಧಿಸಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ.

ಕೈಗಾರಿಕಾ ಕಾರಿಡಾರ್ ಮಾಡುವುದರಿಂದ ಯುವಕರಿಗೆ ಉದ್ಯೋಗಾವಕಾಶ ಸಿಗುತ್ತದೆ. ಆದರೆ, ನೀರಾವರಿ ಪ್ರದೇಶವನ್ನು ಇದಕ್ಕಾಗಿ ಬಳಸಿಕೊಳ್ಳಬಾರದು. ಮುಂದಿನ ತಿಂಗಳು ಕೆಐಎಡಿಬಿ ಅಧಿಕಾರಿಗಳ ಜೊತೆ ಸಭೆ ಕರೆಯುತ್ತೇನೆ ಎಂದವರು ಹೇಳಿದರು.

ಮಳೆಯಿಂದಾಗಿ ಕಳೆದ ವರ್ಷ ಬಿದ್ದಿರುವ ಮನೆಗಳಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ ಹಾಗೂ ಇತ್ತೀಚೆಗೆ ಮಳೆ ಸುರಿದು ಬೆಳೆ ಹಾನಿಯಾದ ರೈತರಿಗೂ (4ನೇ ಪುಟಕ್ಕೆ)

## ಶಿವಮೊಗ್ಗದಲ್ಲಿ ಗುಂಪು ಘರ್ಷಣೆ: ನಿಷೇಧಾಜ್ಞೆ

ಶಿವಮೊಗ್ಗ, ಆ. 15 – ಹಿಂದುತ್ವ ಪ್ರತಿಪಾದಕ ವಿ.ಡಿ. ಸಾವರ್ಕರ್ ಹಾಗೂ ಮೈಸೂರು ರಾಜ ಟಿಪ್ಪು ಸುಲ್ತಾನ್ ಫ್ಲೆಕ್ಸ್ ಅನ್ನು ಇಲ್ಲಿನ ಅಮೀರ್ ಅಹಮದ್ ವೃತ್ತದಲ್ಲಿ ಅಳವಡಿಸುವುದಕ್ಕೆ ಸಂಬಂಧಿಸಿದಂತೆ ಎರಡು ಗುಂಪುಗಳು ಘರ್ಷಣೆ ನಡೆಸಿವೆ. ನಂತರ ನಗರದಲ್ಲಿ ನಿಷೇಧಾಜ್ಞೆ ಹೇರಲಾಗಿದೆ.

ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ವೃತ್ತದ ಹೈಮಾಸ್ಟ್ ದೀಪದ ಕೆಳಗೆ ಸಾವರ್ಕರ್ ಫ್ಲೆಕ್ಸ್ ಅಳವಡಿಸಲು ಒಂದು ಗುಂಪು ಮುಂದಾಗಿತ್ತು. ಇನ್ನೊಂದು ಗುಂಪು ಇದಕ್ಕೆ ಆಕ್ಷೇಪಿಸಿ, ಅಲ್ಲಿ ಟಿಪ್ಪು ಸುಲ್ತಾನ್ ಫ್ಲೆಕ್ಸ್ ಹಾಕುವುದಾಗಿ ಹೇಳಿತ್ತು.

ಈ ಸಂದರ್ಭದಲ್ಲಿ ಎರಡೂ ಗುಂಪುಗಳ ನಡುವೆ ಚಕಮಕಿ ನಡೆದಿದೆ. ಎರಡೂ ಕಡೆಯವರ ಸಾಕಷ್ಟು ಜನರು ಅಲ್ಲಿ ನೆರೆದಿದ್ದಾರೆ. ಜನರನ್ನು ಚೆದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ.

ನಂತರದಲ್ಲಿ ಎರಡೂ (4ನೇ ಪುಟಕ್ಕೆ)

# ಸೈನಿಕರು, ಕಾರ್ಮಿಕರು, ಕುಶಲಕರ್ಮಿಗಳಿಗೆ ಕೊಡುಗೆ

## 76ನೇ ಸ್ವಾತಂತ್ರ್ಯ ದಿನಾಚರಣೆ ಧ್ವಜಾರೋಹಣದ ನಂತರ ಬೊಮ್ಮಾಯಿ ಘೋಷಣೆ


ಬೆಂಗಳೂರು, ಆ. 15 - ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸುಸಂದರ್ಭದಲ್ಲಿ ಸ್ವಚ್ಛತೆ, ಪೌಷ್ಟಿಕತೆ ಕಾಪಾಡಲು, ರೈತರು, ಶ್ರಮಿಕರ ಅಭ್ಯುದಯಕ್ಕಾಗಿ ಹಾಗೂ ಕೆಚ್ಚೆದೆಯ ಸೈನಿಕರ ಕ್ಷೇಮಾಭಿವೃದ್ಧಿಗಾಗಿ ಕೆಲವು ಕೊಡುಗೆಗಳನ್ನು ನೀಡಲು ಸರ್ಕಾರ ತೀರ್ಮಾನಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ಮಾಣಿಕ್ ಷಾ ಪರೇಡ್ ಮೈದಾನದಲ್ಲಿ 76 ನೇ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ರಾಜ್ಯದ ಸೈನಿಕರು ಕರ್ತವ್ಯ ನಿರತರಾಗಿದ್ದಾಗ ಮೃತಪಟ್ಟರೆ, ಅವರ ಕುಟುಂಬದ ಜೀವನಕ್ಕೆ ಭದ್ರತೆ ಒದಗಿಸುವ ಉದ್ದೇಶದಿಂದ ಮೃತ ಸೈನಿಕರ ಕುಟುಂಬದ ಒಬ್ಬ ಸದಸ್ಯರಿಗೆ ಅನುಕಂಪದ ಆಧಾರದಲ್ಲಿ ಸರ್ಕಾರಿ ನೌಕರಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಹೇಳಿದರು.

ರಾಜ್ಯದ ಎಲ್ಲ ಸರ್ಕಾರಿ ಶಾಲೆ-ಕಾಲೇಜುಗಳಲ್ಲಿ ಶೇ. 100ರಷ್ಟು ಶೌಚಾಲಯಗಳ ನಿರ್ಮಾಣವನ್ನು 250 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುವುದು. ಆ ಮೂಲಕ ಶಾಲಾ-ಕಾಲೇಜುಗಳಲ್ಲಿ ಸ್ವಚ್ಛ-ಆರೋಗ್ಯಕರ ವಾತಾವರಣ ನಿರ್ಮಿಸಲಾಗುವುದು ಎಂದವರು ತಿಳಿಸಿದರು.

ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದಿಂದ ಕುಂಬಾರ, ಕಮ್ಮಾರ, ಬಡಗಿ, ಶಿಲ್ಪಿಗಳು, ಭಜಂತ್ರಿ, ಬುಟ್ಟಿ ಹೆಣೆಯುವವರು, ವಿಶ್ವಕರ್ಮರು ಮತ್ತಿತರೆ ಕುಶಲ ಕರ್ಮಿಗಳಿಗೆ ತಲಾ 50 ಸಾವಿರ ರೂ.ವರೆಗೆ ಸಾಲ-ಸಹಾಯಧನ ಯೋಜನೆಯನ್ನು ಜಾರಿಗೆ ತರಲಾಗುವುದು



**ಹುತಾತ್ಮ ಸೈನಿಕರ ಕುಟುಂಬಕ್ಕೆ ಅನುಕಂಪದ ನೌಕರಿ**

**ಶಾಲಾ-ಕಾಲೇಜುಗಳಲ್ಲಿ ಶೌಚಾಲಯ**

**ಕುಶಲಕರ್ಮಿಗಳಿಗೆ ಸಹಾಯಧನ**

**ಭೂ ರಹಿತ ಕೃಷಿ ಕಾರ್ಮಿಕರ ಮಕ್ಕಳಿಗೂ ವಿದ್ಯಾನಿಧಿ**

**4,050 ಹೊಸ ಅಂಗನವಾಡಿ ಸ್ಥಾಪನೆ**

ಎಂದವರು ಹೇಳಿದರು.

ರೈತರ ಮಕ್ಕಳಿಗೆ ಜಾರಿಗೊಳಿಸಿರುವ ರೈತ ವಿದ್ಯಾನಿಧಿ ಯೋಜನೆಯ ಸೌಲಭ್ಯವನ್ನು ಭೂ ರಹಿತ ಕೃಷಿ ಕಾರ್ಮಿಕರ ಮಕ್ಕಳಿಗೂ ವಿಸ್ತರಿಸಲಾಗುವುದು.

ಇದಲ್ಲದೆ ಭೂ ರಹಿತ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶಗಳನ್ನು (2ನೇ ಪುಟಕ್ಕೆ)

### ನೆಹರು ಸ್ಮರಿಸಿದ ಬೊಮ್ಮಾಯಿ

ಬೆಂಗಳೂರು, ಆ. 15 – ತಮ್ಮ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ದೇಶದ ಪ್ರಥಮ ಪ್ರಧಾನ ಮಂತ್ರಿ ಹಾಗೂ ಕಾಂಗ್ರೆಸ್ ನಾಯಕರಾಗಿದ್ದ ಜವಾಹರಲಾಲ್ ನೆಹರು ಅವರನ್ನು ಸ್ಮರಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂವಿಧಾನ ಶಿಲ್ಪಿ ಬಿ. ಆರ್. ಅಂಬೇಡ್ಕರ್ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅಂಥವರನ್ನು ಮರೆಸಲು ಪ್ರತಿಪಕ್ಷ ಪ್ರಯತ್ನಿಸಿತ್ತು ಎಂದು ಆರೋಪಿಸಿದ್ದಾರೆ.

ಸ್ವಾತಂತ್ರ್ಯದ 75ನೇ ವರ್ಷದ ಅಮೃತ ಮಹೋತ್ಸವ ಅಂಗವಾಗಿ ಮಾಣಿಕ್‌ಷಾ ಪರೇಡ್ ಮೈದಾನದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಪ್ರಥಮ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರು, ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಸೇರಿದಂತೆ ಹಲವು ಪ್ರಧಾನಿಗಳು ದೇಶವನ್ನು ಆಳಿದ್ದಾರೆ. ತಮ್ಮದೇ ರೀತಿಯಲ್ಲಿ ದೇಶಕ್ಕೆ ಕೊಡುಗೆ ನೀಡಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿ ಪ್ರತಿಯೊಬ್ಬರ ಕೊಡುಗೆ ಸ್ಮರಿಸಲು ಪ್ರಧಾನ ಮಂತ್ರಿಗಳ ಸಂಗ್ರಹಾಲಯ ಸ್ಥಾಪಿಸಿದ್ದಾರೆ ಎಂದರು.

ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ರಾಜ್ಯ ಸರ್ಕಾರ ಪ್ರಕಟಿಸಿದ್ದ ಜಾಹೀರಾತಿನಲ್ಲಿ ನೆಹರೂ ಅವರನ್ನು ಸ್ಮರಿಸಿರಲಿಲ್ಲ. ಈ ಬಗ್ಗೆ ಕಾಂಗ್ರೆಸ್ ತೀವ್ರ ವಾಗ್ದಾಳಿ ನಡೆಸಿತ್ತು. ಈ ವಿವಾದದ ಬಗ್ಗೆ ಬೊಮ್ಮಾಯಿ ಪರೋಕ್ಷವಾಗಿ ಪ್ರಸ್ತಾಪಿಸಿ ಕಾಂಗ್ರೆಸ್‌ಗೆ ತಿರುಗೇಟು ನೀಡಿದ್ದಾರೆ.

# ವೀರಶೈವ-ಲಿಂಗಾಯತ ಒಳಪಂಗಡ ಮರೆತು ಒಬಿಸಿ ಮೀಸಲಾತಿಗೆ ಪ್ರಯತ್ನಿಸಬೇಕು



### ವರದ ಶಂಕರ ಪೂಜಾ ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಎಸ್ಸೆಸ್ ಕರೆ

ದಾವಣಗೆರೆ, ಆ. 15- ವೀರಶೈವ-ಲಿಂಗಾಯತ ಒಳಪಂಗಡಗಳನ್ನು ಮರೆತು ಒಂದೇ ಮನಸ್ಸಿನಿಂದ ಒಬಿಸಿ ಅನುದಾನ ದಡಿಯಲ್ಲಿ ಸೇರ್ಪಡೆ ಮಾಡುವಂತೆ ರಾಜ್ಯ ಸರ್ಕಾರದ ಮೂಲಕ ಕೇಂದ್ರಕ್ಕೆ ಮನವಿ ಮಾಡಲಾಗಿದೆ.ಈಗಾಗಲೇ ಶುಭ ಸೂಚನೆ ಸಿಕ್ಕಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಹೇಳಿದರು.

ನಗರದ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಮಹಿಳಾ ಘಟಕ, ತಾಲ್ಲೂಕು ಘಟಕಗಳ ಸಂಯುಕ್ತಾಶ್ರಯದಲ್ಲಿ ಲೋಕ ಕಲ್ಯಾಣಾರ್ಥ ವರದ ಶಂಕರ ಪೂಜಾ, ಶ್ರೀ ರುದ್ರ ಪಠಣ, ಶಿವ ಸಹಸ್ರ ನಾಮಾವಳಿ, ಲಲಿತ ಸಹಸ್ರ ನಾಮಾವಳಿ ಪಠಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ವೀರಶೈವ-ಲಿಂಗಾಯತ ಧರ್ಮದ 92 ಒಳಪಂಗಡಗಳನ್ನು ಮರೆತು, ಒಟ್ಟಾರೆ ಅಂಗದ ಮೇಲೆ ಲಿಂಗ ಧರಿಸಿದ ವೀರಶೈವರೆಲ್ಲರೂ ಒಂದೇ ಎಂಬ ಭಾವನೆಯಿಂದ, ಮೇಲು-ಕೀಳು ಎನ್ನದೇ ಒಬಿಸಿ ಅಡಿಯಲ್ಲಿ ಮೀಸಲಾತಿಗೆ ಸಹಮತ ವ್ಯಕ್ತಪಡಿಸಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ವೀರಶೈವ ಲಿಂಗಾಯತ ಸಮಾಜದ ಬಂಧುಗಳು ಸಂಸ್ಕಾರ ಉಳಿಸುವಂತಹ ನಿಟ್ಟಿನಲ್ಲಿ ಶ್ರಮಪಡಬೇಕಾಗಿದೆ. ಅಳಿವಿನಂಚಿನಲ್ಲಿ ಸಂಸ್ಕಾರ ಉಳಿಸುವ ನಿಟ್ಟಿನಲ್ಲಿ ಮಹಿಳಾ ಘಟಕ ಹೆಜ್ಜೆ ಇಟ್ಟಿದೆ, ಶುಭಾರಂಭವಾಗಿದೆ. ಸಂಸ್ಕಾರ ಬೆಳೆಸಲು ಮನೆ ಮನೆಗಳಲ್ಲಿ ಮಾಸಿಕ ಹಾಗೂ ವಾರ್ಷಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಸಂತಸದ ವಿಚಾರ ಎಂದರು.

ವೀರಶೈವ ಲಿಂಗ ಮಕ್ಕಳಿಗೆ ಸಂಸ್ಕಾರ ನೀಡುವ ಉದ್ದೇಶದಿಂದ ಧರ್ಮದ ಚೌಕಟ್ಟನ್ನು ಹಾಕಿಕೊಳ್ಳುವ ಮೂಲಕ ನಿಜ ಆಚರಣೆಯಲ್ಲಿ ವೀರಶೈವರಾಗಬೇಕೆ ವಿನಃ ಬಾಯಿಮಾತಿನಲ್ಲಿ ವೀರಶೈವರಾಗುವುದನ್ನು ನಿಲ್ಲಿಸಬೇಕು.

ನಾಡಿನ ವೀರಶೈವ ಪೀಠ, ಮಠಗಳು ಸ್ವಾತಂತ್ರ್ಯ ಪೂರ್ವದಲ್ಲಿ ಜಾತಿ, ಮತ, ಪಂಥಗಳನ್ನೆದೇ ಅತೀತವಾಗಿರುವ ಮಾನವ ಸಂಕುಲಕ್ಕೆ ಅನ್ನ, ಆಶ್ರಯ, (2ನೇ ಪುಟಕ್ಕೆ)

# ಅಭಿವೃದ್ಧಿಗಾಗಿ ಬೇಕಿದೆ 'ಪಂಚ ಪಣ'

## ಕೆಂಪು ಕೋಟೆಯ ಮೇಲೆ ಪ್ರಧಾನಿ ಮೋದಿ

ನವದೆಹಲಿ ಆ. 15 – ಭ್ರಷ್ಟಾಚಾರ ಹಾಗೂ ಪಕ್ಷಪಾತ ಭಾರತದ ಎರಡು ದೊಡ್ಡ ಸವಾಲುಗಳು ಎಂದಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಮುಂದಿನ 25 ವರ್ಷಗಳಲ್ಲಿ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶ ಮಾಡಲು ಪಂಚ ಪಣ ತೊಡಬೇಕು ಎಂದು ಕರೆ ನೀಡಿದ್ದಾರೆ.

ಕೆಂಪು ಕೋಟೆಯ ಮೇಲೆ ಸ್ವಾತಂತ್ರ್ಯದ 75ನೇ ವರ್ಷದ ಅಮೃತ ಮಹೋತ್ಸವ ಭಾಷಣ ಮಾಡುತ್ತಿದ್ದ ಅವರು, ಹೊಸ ಬದ್ಧತೆಯೊಂದಿಗೆ ಹೊಸ ದಿಕ್ಕಿನೆಡೆ ಸಾಗುವ ಸಮಯ ಇದಾಗಿದೆ ಎಂದಿದ್ದಾರೆ.

ಇದು ಅಮೃತ ಕಾಲ ಎಂದು ಬಣ್ಣಿಸಿರುವ ಮೋದಿ, ಹೊಸ ಭಾರತ ವೇಗವಾಗಿ ಪ್ರಗತಿಯಾಗಲಿ ಎಂದು ಪ್ರತಿಯೊಬ್ಬ ಭಾರತೀಯ ಉತ್ಸಾಹ ಹಾಗೂ ಅಸಹನೆಯಿಂದ ಕಾಯುತ್ತಿದ್ದಾನೆ ಎಂದಿದ್ದಾರೆ. ಭ್ರಷ್ಟಾಚಾರದ ಕುರಿತು ಮಾತನಾಡಿದ ಪ್ರಧಾನಿ, ದೇಶದಲ್ಲಿ ಕೆಲವರಿಗೆ ಬದುಕಲು ಜಾಗವಿಲ್ಲ. ಆದರೆ, ಇನ್ನು ಕೆಲವರಿಗೆ ಅಕ್ರಮವಾಗಿ ಗಳಿಸಿದ ಹಣ ಮುಚ್ಚಿಡಲು ಜಾಗವಿಲ್ಲ ಎಂದು ವಿಷಾದಿಸಿದ್ದಾರೆ. ಭ್ರಷ್ಟಾಚಾರ (4ನೇ ಪುಟಕ್ಕೆ)





# ಸರ್ಕಾರಿ ಸೌಲಭ್ಯಗಳು ತಲುಪಿದಾಗ ಪ್ರಗತಿ

## ಹರಪನಹಳ್ಳಿ: ಸ್ವಾತಂತ್ರ್ಯೋತ್ಸವದಲ್ಲಿ ಉಪ ವಿಭಾಗಾಧಿಕಾರಿ ಟಿ.ವಿ. ಪ್ರಕಾಶ್



ಹರಪನಹಳ್ಳಿ, ಆ.15- ಸರ್ಕಾರದ ಸೌಲಭ್ಯಗಳು ಕಟ್ಟಕಡೆಯ ವ್ಯಕ್ತಿಗೂ ತಲುಪುವ ಕೆಲಸವಾದಾಗ ಮಾತ್ರ ದೇಶದ ಪ್ರಗತಿ ಸಾಧ್ಯ ಎಂದು ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್ ಅವರು ಹೇಳಿದರು.

ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಇಂದು ಆಯೋಜಿಸಿದ್ದ 75ನೇ ವರ್ಷದ ಸ್ವಾತಂತ್ರ್ಯ ದಿನದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರೂ ಅವರವರ ಕ್ಷೇತ್ರಗಳಲ್ಲಿ ಪ್ರಾಮಾಣಿಕತೆ ಹಾಗೂ ನಿಷ್ಠೆಯಿಂದ ಕೆಲಸ ಮಾಡುವ ಮೂಲಕ ದೇಶಕ್ಕೆ ಕೊಡುಗೆ ನೀಡಬೇಕು. ಯುವಕರಲ್ಲಿ ದೇಶ ಭಕ್ತಿ ಇರಬೇಕು ಎಂದರು.

ಪುರಸಭಾ ಅಧ್ಯಕ್ಷ ಎಚ್.ಎ.ಅಶೋಕ್ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ವಿಶ್ವದಲ್ಲಿ ಭಾರತದ ಗೌರವ ಹೆಚ್ಚಾಗಲು ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತ ಕಾರಣ. ಪಟ್ಟಣದ ಹೋಟೆಲ್‌ಗಳಲ್ಲಿ ಮಿನಿ ಶುದ್ದ ಕುಡಿಯುವ ನೀರಿನ ಘಟಕ ಸ್ಥಾಪಿಸಿಕೊಳ್ಳಬೇಕು. ಈ ಸಂಬಂಧ ಶೀಘ್ರ ಹೋಟೆಲ್ ಗಳಿಗೆ ನೋಟಿಸ್ ನೀಡಲಾಗುವುದು ಎಂದು ಹೇಳಿದರು.

ಡಿವೈಎಸ್ಪಿ ವಿ.ಎಸ್. ಹಾಲುಮೂರ್ತಿರಾವ್, ಪುರಸಭೆ ಉಪಾಧ್ಯಕ್ಷೆ ನಿಟ್ಟೂರು ಭೀಮವ್ವ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ಸದಸ್ಯರುಗಳಾದ ಕಿರಣ್ ಶಾನ್‌ಬಾಗ್, ಜಾಕೀರ್ ಹುಸೇನ್, ಜಾವೇದ್, ರಾಘವೇಂದ್ರ ಶೆಟ್ಟಿ, ಗೌಳಿ ವಿನಯ್, ಭರತೇಶ, ರುದ್ರಪ್ಪ, ತಹಶೀಲ್ದಾರ್ ಡಾ. ಶಿವಕುಮಾರ ಬಿರಾದಾರ, ಕಾರ್ಯ ನಿರ್ವಾಹಣಾಧಿಕಾರಿ ಕೆ.ಆರ್. ಪ್ರಕಾಶ್, ಪುರಸಭೆ ಮುಖ್ಯಧಿಕಾರಿ ಯರಗುಡಿ ಶಿವಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಯು.ಬಸವರಾಜಪ್ಪ, ವಲಯ ಅರಣ್ಯಾಧಿಕಾರಿ ಮಲ್ಲೇಶಪ್ಪ, ನೌಕರರ ಸಂಘದ ಅಧ್ಯಕ್ಷ ಕೆ.ಸಿದ್ದಲಿಂಗನಗೌಡ, ಪುರಸಭೆ ಸದಸ್ಯ ಜಾಕೀರ್ ಹುಸೇನ್, ಶಿಕ್ಷಣ ಸಂಯೋಜಕ ಗಿರಜ್ಜಿ ಮಂಜುನಾಥ್, ಸಿಪಿಐ ನಾಗರಾಜ ಕಮ್ಮಾರ, ಪಿಎಸ್‌ಐ ಸಿ. ಪ್ರಕಾಶ್, ತಾಲ್ಲೂಕು ಮೀನುಗಾರಿಕೆ ಇಲಾಖೆಯ ಮಂಜುಳಾ, ಆರ್.ಐ.ಎಸ್ ಅರವಿಂದ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ರಾಷ್ಟ್ರಧ್ವಜ ಭಾವೈಕ್ಯತೆಯ ಸಂಕೇತ : ಶಾಸಕ ಲಿಂಗಣ್ಣ



ಮಾಯಕೊಂಡ, ಆ.15 - ರಾಷ್ಟ್ರ ಧ್ವಜ ಭಾರತದ ಭಾವೈಕ್ಯದ ಸಂಕೇತವಾಗಿದ್ದು, ಎಲ್ಲರೂ ಗೌರವಿಸಬೇಕು ಎಂದು ಶಾಸಕ ಪ್ರೊ.ಲಿಂಗಣ್ಣ ಕರೆ ನೀಡಿದರು.

ಇಲ್ಲಿನ ಕೆಪಿಎಸ್ ಮೈದಾನದಲ್ಲಿ ನಡೆದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಪ್ರಯುಕ್ತ ಧ್ವಜ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ದೇಶವಾಸಿಗಳಲ್ಲಿ ಭಾರತದ ತ್ರಿವರ್ಣ ಧ್ವಜದ ಮಹತ್ವ ತಿಳಿಸಲು ಮನೆ ಮನೆಯಲ್ಲಿ ತಿರಂಗ ಧ್ವಜ ಹಾರಿಸಲಾಗುತ್ತಿದೆ. ಭಾರತದ ತ್ರಿವರ್ಣ ಧ್ವಜ ದೇಶದ ಏಕತೆ ಸಾರುತ್ತದೆ. ಧ್ವಜದ ಮೇಲೆ ಎಲ್ಲರೂ ಭಕ್ತಿ, ಗೌರವ ಇಟ್ಟುಕೊಳ್ಳಬೇಕು. ದೇಶದ ಗೌರವದ ಸಂಕೇತವೇ ರಾಷ್ಟ್ರ ಧ್ವಜ. ಎಲ್ಲ ಭಾರತೀಯರೂ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನವನ್ನು ಗೌರವಿಸಬೇಕು ಎಂದು ಕರೆ ನೀಡಿದರು.

ಮಾಯಕೊಂಡಕ್ಕೆ ಆಯುರ್ವೇದ ಆಸ್ಪತ್ರೆ ಮಂಜೂರಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸುವ ಪ್ರಯತ್ನ ನಡೆದಿದೆ. ಸರ್ಕಾರದ ಎಲ್ಲಾ ಸೌಲಭ್ಯಗಳು ಸದ್ಬಳಕೆಯಾಗಬೇಕು. ಶೀಘ್ರ ಸುಸಜ್ಜಿತ ಬಸ್ ಸ್ಟ್ಯಾಂಡ್ ಕೂಡಾ ನಿರ್ಮಾಣವಾಗಲಿದೆ ಎಂದರು.

ಪಿಡಿಓ. ನಾಗರಾಜ್ ಸರ್ಕಾರದ ವಿವಿಧ ಯೋಜನೆಗಳನ್ನು ಪರಿಚಯಿಸಿದರು. ಕೊರೊನಾ ವಾರಿಯರ್ ಉಮಾಪತಿ, ಕುಸ್ತಿಪಟು ವೆಂಕಟೇಶ್, ದೈಹಿಕ ಶಿಕ್ಷಕ ಬಿರಾದಾರ್ ಅವರನ್ನು ಸನ್ಮಾನಿಸಲಾಯಿತು.

ಶ್ವೇತಾ ಪ್ರಾರ್ಥಿಸಿದರು. ಹಿರೇಗೌಡರ್ ಸ್ವಾಗತಿಸಿದರು. ಉಮಾಶಂಕರ್, ಶರಣಪ್ಪ ಮತ್ತು ರವಿ ನಿರೂಪಿಸಿದರು.

ಗ್ರಾಮ ಪಂಚಾಯತಿ ಅಧ್ಯಕ್ಷೆ ಶಿವಮ್ಮ ಮಲ್ಲಿಕಾರ್ಜುನ, ಉಪಾಧ್ಯಕ್ಷ ವಗ್ಗಪ್ಪರ ಮಲ್ಲಪ್ಪ ಮತ್ತು ಸದಸ್ಯರು ಪಿಡಿಓ ನಾಗರಾಜ್, ಉಪ ತಹಶೀಲ್ದಾರ್ ರಾಮಸ್ವಾಮಿ, ಪಿಎಸ್ಐ ರೂಪ್ಲಿಬಾಯಿ, ಪಿಎಸ್ಐ ಪಾವಡೇಕರ್, ಪಿಎಸಿಎಸ್ ಅಧ್ಯಕ್ಷ ಬೀರಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಹರಿಹರ : ಜೆಡಿಎಸ್‌ನಿಂದ ಬೈಕ್ ರ್ಯಾಲಿ ಮೂಲಕ ತಿರಂಗಾ ಮೆರವಣಿಗೆ



ಹರಿಹರ, ಅ. 15 - ನಗರದಲ್ಲಿ ಬೃಹತ್ ಬೈಕ್ ರ್ಯಾಲಿಯೊಂದಿಗೆ ತಿರಂಗಾ ಮೆರವಣಿಗೆಯನ್ನು ನಡೆಸುವ ಮೂಲಕ ಜೆ.ಡಿ.ಎಸ್. ಪಕ್ಷದಿಂದ 75ನೇ ವರ್ಷದ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಿಸಲಾಯಿತು.

ಬೆಳಿಗ್ಗೆ 9ಕ್ಕೆ ನಗರದ ಜೆಡಿಎಸ್ ಕಛೇರಿಯ ಮುಂಭಾಗ ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಧ್ವಜಾರೋಹಣ ನೆರವೇರಿಸಿದರು. ಶಿವಶಂಕರ್ ಬೈಕ್ ಓಡಿಸುವ ಮೂಲಕ ಬೃಹತ್ ಬೈಕ್ ರ್ಯಾಲಿಗೆ ಚಾಲನೆ ನೀಡಿದರು.

ಜೆಡಿಎಸ್ ಕಛೇರಿಯಿಂದ ಆರಂಭವಾದ ರ್ಯಾಲಿಯು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಈ ವೇಳೆ ಜೆಡಿಎಸ್ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ, ನಗರಸಭಾ ಸದಸ್ಯರಾದ ಆರ್.ಸಿ ಜಾವೀದ್, ಹರ್ಲಾಪುರ್ ಜಂಬಣ್ಣ, ಬಿ.ಅಲ್ತಾಫ್, ಜೆಡಿಎಸ್ ನಗರ ಘಟಕ ಅಧ್ಯಕ್ಷ ಹಬೀಬ್ ವುಲ್ಲಾ, ಯುವ ಘಟಕ ಅಧ್ಯಕ್ಷ ಪ್ರೇಮ್ ಕುಮಾರ ಅಡಿಕಿ, ಮಾಜಿ ಸದಸ್ಯರಾದ ಅತಾವುಲ್ಲಾ, ನಗಿನಾ ಸುಭಾನ್‌ಸಾಬ್, ಮುಖಂಡರಾದ ಮಂಜುನಾಥ್ ಫೈನಾನ್ಸ್, ಜಿ.ನಂಜಪ್ಪ, ಕೆ.ವಿ ಬಸವರಾಜ್ ಮತ್ತಿತರರು ಉಪಸ್ಥಿತರಿದ್ದರು.

# ಬಹುಜನರ ಕಲ್ಯಾಣಕ್ಕೆ ಮಹಾಮನೆಯ ಮಂತ್ರ

**(2ನೇ ಪುಟಕ್ಕೆ)** ಗಾಂಧೀಜಿ, ಲಾಲಾ ಲಜಪತರಾಯ್, ಬಾಲಗಂಗಾಧರ ತಿಲಕ್, ಬಿಪಿನ್ ಚಂದ್ರಪಾಲ್, ಸರ್ದಾರ್ ವಲ್ಲಭಭಾಯಿ ಪಟೇಲ್, ಸುಭಾಶ್ ಚಂದ್ರಬೋಸ್, ಭಗತ್ ಸಿಂಗ್, ಆಜಾದ್ ಚಂದ್ರಶೇಖರ್, ರಾಜ್ ಗುರು, ಸುಖದೇವ್, ವೀರ ಸಾವರ್ಕರ್ ಅಂತಹ ಮಹಾತ್ಮರ ಹೋರಾಟ ಹಾಗೂ ತ್ಯಾಗ, ಬಲಿದಾನಗಳನ್ನು ನೆನಪಿಸಿ ನಮನ ಸಲ್ಲಿಸುವುದು ನಮ್ಮ ಕರ್ತವ್ಯ ಎಂದವರು ಹೇಳಿದರು.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಆಗಿರುವ ಪ್ರಗತಿಗಳ ಕುರಿತು ಸಚಿವರು ಸುದೀರ್ಘವಾಗಿ ವಿವರಗಳನ್ನು ನೀಡಿದರು.

ಇದಕ್ಕೂ ಮುಂಚೆ ಸಚಿವರು ರಾಷ್ಟ್ರಧ್ವಜಾರೋಹಣ ನೆರವೇರಿಸಿದರು. ನಂತರ 22 ತಂಡಗಳಿಂದ ಪಥಸಂಚಲನ ಹಾಗೂ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದರು.

ಈ ಸಂದರ್ಭದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್, ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ, ಉಪ ಮೇಯರ್ ಗಾಯತ್ರಿಬಾಯಿ, ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್, ಪೂರ್ವ ವಲಯ ಐ.ಜಿ.ಪಿ. ತ್ಯಾಗರಾಜನ್, ಜಿಲ್ಲಾಧಿಕಾರಿ ಶಿವಾನಂದ ಕಪಾಸಿ, ಜಿ.ಪಂ. ಸಿಇಓ ಚೆನ್ನಪ್ಪ, ಎಸ್ಪಿ ಸಿ.ಬಿ. ರಿಷ್ಯಂತ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಆರ್.ಬಸರಗಿ, ಉಪವಿಭಾಗಾಧಿಕಾರಿ ದುರ್ಗಾಶ್ರೀ, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ ಮತ್ತಿತರರು ಉಪಸ್ಥಿತರಿದ್ದರು.

### ಸಾಧಕರು, ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ

ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ನಗರದ ವಿದ್ಯಾನಗರದ ಬಿ.ಎಂ. ಶಿವಲಿಂಗ ಹಾಗೂ ತರಳಬಾಳು ಬಡಾವಣೆಯ ತಿಪ್ಪೇಸ್ವಾಮಿ ಹಳೇ ಬಿಸಲೇರಿಯ ನೀಲಪ್ಪ ಮತ್ತು ಚನ್ನಬಸಪ್ಪ ಅವರನ್ನು ಸನ್ಮಾನಿಸಲಾಯಿತು.

ಮುಖ್ಯಮಂತ್ರಿ ಪದಕ ವಿಜೇತರಾದ ನಗರ ವಿಭಾಗದ ಡಿವೈಎಸ್‌ಪಿ ನರಸಿಂಹ ತಾಮ್ರಧ್ವಜ, ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಬಿ.ಎಸ್. ಪುಟ್ಟಪ್ಪ ಹಾಗೂ ಆಜಾದ್ ನಗರ ಪೊಲೀಸ್ ಠಾಣೆಯ ತಿಪ್ಪೇಸ್ವಾಮಿ ಅವರಿಗೆ ಸನ್ಮಾನಿಸಲಾಯಿತು.

ಕೇಂದ್ರ ಗೃಹ ಸಚಿವಾಲಯದ ವಿಶೇಷ ತನಿಖಾ ಪ್ರಶಸ್ತಿ ಬಸವನಗರ ಠಾಣೆ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್. ಗುರುಬಸವರಾಜ ಹಾಗೂ ಹೋಂ ಗಾರ್ಡ್‌ನ ಕೆ.ಸರಸ್ವತಿ, ಎಂ. ರಾಘವೇಂದ್ರ ಅವರನ್ನು ಸನ್ಮಾನಿಸಲಾಯಿತು.

ಎ.ಬಿ. - ಎ.ಆರ್.ಕೆ. ಆರೋಗ್ಯ ಯೋಜನೆಯಲ್ಲಿ ಸಾಧನೆ ಮಾಡಿದ ಕೊಂಡಜ್ಜಿಯ ಪ್ರಾಥಮಿಕ ಚಿಕಿತ್ಸಾ ಕೇಂದ್ರ ಹಾಗೂ ನಗರದ ಸ್ಪಂದನ ಯುರಾಲಜಿ ಸಂಸ್ಥೆಗಳನ್ನು ಗೌರವಿಸಲಾಯಿತು.

## ಹರಿಹರ : 75 ಮೀಟರ್ ಉದ್ದದ ರಾಷ್ಟ್ರಧ್ವಜದ ತಿರಂಗಾ ಯಾತ್ರೆ



ಹರಿಹರ,ಆ.15- ನಗರದ ಗಣಪಾಸ್ ಇನ್ನೋವೇಟೀವ್ ಗ್ರೂಪ್ ವತಿಯಿಂದ ಸ್ವಾತಂತ್ರ್ಯ ದ 75ನೇ ಅಮೃತ ಮಹೋತ್ಸವದ ಸವಿನೆನಪಿಗಾಗಿ 75 ಮೀಟರ್ ಉದ್ದದ ರಾಷ್ಟ್ರಧ್ವಜದ ತಿರಂಗಾ ಯಾತ್ರೆ ನಡೆಯಿತು.

ಕಾರ್ಯಕ್ರಮಕ್ಕೆ ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ಅವರು ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ನಗರದ ಗಾಂಧಿ ಮೈದಾನದಿಂದ ಆರಂಭಗೊಂಡ ತಿರಂಗಾ ಅಭಿಮಾನ ಯಾತ್ರೆಯು ಹರಪನಹಳ್ಳಿ ವೃತ್ತ , ರಾಣಿ ಚೆನ್ನಮ್ಮ ವೃತ್ತದಲ್ಲಿ ಸಂಚರಿಸಿ ದೇವಸ್ಥಾನ ರಸ್ತೆಯ ಮೂಲಕ ಹರಿಹರೇಶ್ವರ ದೇವಸ್ಥಾನ ತಲುಪಿತು. ನಾಗರೀಕರು ನಗರದೆಲ್ಲೆಡೆ ಹೂವಿನ ಮಳೆಗರೆದು ಭಾರತದ ಧ್ವಜವನ್ನು ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಬಿಜೆಪಿ ಮುಖಂಡರಾದ ಚಂದ್ರಶೇಖರ್ ಪೂಜಾರ್, ತುಳಜಪ್ಪ ಭೂತೆ, ಬಿಜೆಪಿ ಶಿವಾನಂದ, ಬಾತಿ ಚಂದ್ರಶೇಖರ್, ಆಮ್ ಆದ್ಮಿ ಪಕ್ಷದ ಗಣೇಶ ದುರ್ಗದ್, ಗಣಪಾಸ್ ಸಮಿತಿಯ ಯುವಕರಾದ ವಿನಾಯಕ, ಗಣೇಶ, ರಮೇಶ್, ತಿಪ್ಪೇರುದ್ರಸ್ವಾಮಿ, ಪ್ರೌಢಶಾಲಾ ಮುಖ್ಯ ಶಿಕ್ಷಕ ಬಿ.ಬಿ. ರೇವಣ್ಣನಾಯ್ಕ್, ಎಸ್.ಹೆಚ್. ಹೂಗಾರ್, ರಾಖೇಶ್, ರಾಜೇಶ್, ಧರಣೇಂದ್ರ, ಚಂದ್ರಕಾಂತ ಗೌಡ, ದಿನೇಶ್ ಮತ್ತಿತರರು ಉಪಸ್ಥಿತರಿದ್ದರು.

## ವೀರಶೈವ-ಲಿಂಗಾಯತ ಒಳಪಂಗಡ ಮರೆತು ಒಬಿಸಿ ಮೀಸಲಾತಿಗೆ ಪ್ರಯತ್ನಿಸಿ

**(1ನೇ ಪುಟದಿಂದ)** ವಿದ್ಯೆ, ಜ್ಞಾನ ನೀಡುತ್ತಾ, ಯಾವತ್ತು ಕೂಡ ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಉದ್ಘೋಷದೊಂದಿಗೆ ಎಲ್ಲ ಮನುಕುಲಕ್ಕೆ ಧರ್ಮದ ಸಂಸ್ಕಾರ ನೀಡುವಲ್ಲಿ ಬದುಕು ಕಟ್ಟಿಕೊಡುವಲ್ಲಿ ಮಠ, ಮಾನ್ಯಗಳ ಪಾತ್ರ ದೊಡ್ಡದಿದೆ. ನಿತ್ಯ ಆರಾಧಕರಾಗಬೇಕೆಂದು ಕಿವಿಮಾತು ಹೇಳಿದರು.

ಇದೇ ಸಂದರ್ಭದಲ್ಲಿ ಅಕ್ಕಮಹಾದೇವಿ ಸಮಾಜದ ಹಿರಿಯ ವನಿತೆಯರಾದ ಕಂಚಿಕೇರಿ ಸುಶೀಲಮ್ಮ, ನೀಲಗುಂದ ಜಯ್ಯಮ್ಮ, ಉಮಾ ವೀರಭದ್ರಪ್ಪ, ಸರೋಜಮ್ಮ ಮುಂಡಾಸದ, ದೊಗ್ಗಳ್ಳಿ ಸುವರ್ಣಮ್ಮ, ಕಿರುವಾಡಿ ಗಿರಿಜಮ್ಮ ಅವರನ್ನು ಗೌರವಿಸಲಾಯಿತು.

ಭಾಗವಹಿಸಿದ ಮಹಿಳೆಯರಿಗೆ ಉಡಿ ತುಂಬಿ, ರಕ್ಷೆ ಕಟ್ಟಲಾಯಿತು. ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಸಿದ್ದೇಶ್, ರಾಷ್ಟ್ರೀಯ ಯುವ ಘಟಕದ ಉಪಾಧ್ಯಕ್ಷ ಅಣಬೇರು ಸಂದೀಪ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷ ಐನಳ್ಳಿ ಶುಭಾ, ನಗರ ಘಟಕದ ಅಧ್ಯಕ್ಷೆ ಪುಷ್ಪ ವಾಲಿ, ಶೋಭಾ ಕೊಟ್ರೇಶ್, ಜಗಳೂರಿನ ಶಶಿಕಲಾ, ದಾಕ್ಷಾಯಿಣಿ ಅಂದಾನಪ್ಪ, ಮಂಜುಳಾ, ಸೌಮ್ಯ ಸತೀಶ್, ಮಂಗಳಗೌರಿ, ಮಂಗಳ ಕರಿಬಸಪ್ಪ, ರೂಪ, ಶಶಿಕಲಾ ಶಿವಲಿಂಗಪ್ಪ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಶಸ್ತ್ರಚಿಕಿತ್ಸೆಯಿಂದ ನೊಂದ ಮಹಿಳೆಯರಿಗೆ ಶೀಘ್ರವೇ ನ್ಯಾಯ ; ಪಾದಯಾತ್ರೆ ರದ್ದು



### ರಾಣೇಬೆನ್ನೂರು

ರಾಣೇಬೆನ್ನೂರು, ಆ.15- ಸರ್ಕಾರಿ ವೈದ್ಯರಿಂದ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಅನ್ಯಾಯಕ್ಕೊಳಗಾದ ಮಹಿಳೆಯರ ಪರ ಹೋರಾಟ ನಡೆಸಿದ್ದ ಶಿವಪುತ್ರಪ್ಪ ಮಲ್ಲಾಡದ ಹೋರಾಟಕ್ಕೆ ಶೀಘ್ರವೇ ಅಂತಿಮ ರೂಪ ದೊರಕಲಿದೆ ಎಂದು ಗೊತ್ತಾಗಿದೆ.

ಈ ಸಂಬಂಧ ಮುಖ್ಯಮಂತ್ರಿಗಳ ಮನೆವರೆಗೆ ನಡೆಯಲಿದ್ದ ಮಹಿಳೆಯರ ಪಾದಯಾತ್ರೆ ರದ್ದಾಗಿದ್ದು, ತಮ್ಮ ಹೋರಾಟ ಫಲಪ್ರದವಾಗುವ ಸಮಯ ಬಂದಿತೆನ್ನುವ ನಂಬಿಕೆಗೆಯೊಂದಿಗೆ ಕಳೆದ ನಾಲ್ಕು ವರ್ಷಗಳಿಂದ ಹೋರಾಟ ನಡೆಸಿದ್ದ ಆ ಮಹಿಳೆಯರು ಇಂದು ಹರ್ಷಚಿತ್ತರಾಗಿ ಪತ್ರಕರ್ತರೆದುರು ವಿಜಯದ ಸಂಕೇತ ಪ್ರದರ್ಶಿಸಿದರು.

ಮಲ್ಲಾಡದ ಅವರನ್ನೊಳಗೊಂಡ ಸಮಿತಿಯಿಂದ ವರದಿಯ ದೃಢೀಕರಣ ತರಿಸಿಕೊಂಡು, ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ನಡೆಸಿ, ಅನ್ಯಾಯಕ್ಕೊಳಗಾದ ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡಲು ಜಿಲ್ಲಾಧಿಕಾರಿಗಳು ಮಧ್ಯಸ್ಥಿಕೆ ವಹಿಸಿದ್ದಾರೆ ಎಂದು ಗೊತ್ತಾಗಿದೆ.

# ತ್ಯಾಗ, ಬಲಿದಾನದ ಸ್ವಾತಂತ್ರ್ಯವನ್ನು ಜತನದಿಂದ ಕಾಪಾಡಿ



### ಕೊಟ್ಟೂರು ಕಾರ್ಯಕ್ರಮದಲ್ಲಿ ಶಾಸಕ ಭೀಮಾನಾಯ್ಕ ಕರೆ

ಕೊಟ್ಟೂರು, ಆ.15- ರಾಷ್ಟ್ರದ ಹಿರಿಯ ಮಹನೀಯರುಗಳ ತ್ಯಾಗ, ಬಲಿದಾನ ಗಳಿಸಿದ ಸ್ವಾತಂತ್ರೋತ್ಸವ ಜತನದಿಂದ ಕಾಪಾಡಿಕೊಂಡು ಅವರ ಸೇವೆಯನ್ನು ಸ್ಮರಿಸಿಕೊಂಡು ರಾಷ್ಟ್ರದ ಅಭಿವೃದ್ಧಿಯತ್ತ ಮುಂದೆ ಸಾಗೋಣ. ಯಾವುದೇ ಕಾರಣಕ್ಕೂ ಸ್ವಾತಂತ್ರ್ಯಕ್ಕೆ ಧಕ್ಕೆ ಆಗದಂತೆ ಗಮನ ಹರಿಸಬೇಕಿರುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಶಾಸಕ ಎಸ್.ಭೀಮಾನಾಯ್ಕ ಹೇಳಿದರು.

ಪಟ್ಟಣದ ಗೊರ್ಲಿ ಶರಣಪ್ಪ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜ್‌ನ ಮೈದಾನದಲ್ಲಿ ಕೊಟ್ಟೂರು ತಾಲ್ಲೂಕು ಆಡಳಿತ ಹಮ್ಮಿಕೊಂಡಿದ್ದ 75ನೇ ಸ್ವಾತಂತ್ರ್ಯ ದಿನೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಜಾಸತ್ತಾತ್ಮಕವಾಗಿ ರೂಪಿತಗೊಂಡ ಸಂವಿಧಾನದ ಆಶಯದಂತೆ ಆಡಳಿತ ಹೊಂದಿದವರು ಸರ್ವರನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬೇಕು. ಜಾತ್ಯತೀತ, ಸಾಮರಸ್ಯದ ನಿಲುವುಗಳನ್ನು ಸದಾ ಕಾಪಾಡಿಕೊಂಡು ಸೌಹಾರ್ದ ವಾತಾವರಣದಲ್ಲಿ ಬದುಕು ಕಟ್ಟಿಕೊಳ್ಳಬೇಕು ಎಂದರು.

ಕೊಟ್ಟೂರಿನಲ್ಲಿ 12 ಕೋಟಿ ರೂ. ಯೋಜನಾ ವೆಚ್ಚದಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮತ್ತು ಕೊಟ್ಟೂರು ಕೆರೆಗೆ ನೀರು ತರುವ ಯೋಜನೆಗೆ ಸರ್ಕಾರದಿಂದ ಅನುದಾನ ಮಂಜೂರು ಮಾಡಿಸಿಕೊಂಡು ಶೀಘ್ರದಲ್ಲೇ ಈ ಕಾರ್ಯಗಳಿಗೆ ಚಾಲನೆ ದೊರೆಯಲಿದೆ ಎಂದು ಅವರು ಹೇಳಿದರು.

ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ತಹಶೀಲ್ದಾರ್ ಎಂ. ಕುಮಾರಸ್ವಾಮಿ, ಹಿರಿಯರ ಸದಾಶಯದಂತೆ ರಾಷ್ಟ್ರವನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಅಭಿವೃದ್ಧಿ ಪಥದತ್ತ ಮುನ್ನಡೆಯೋಣ ಎಂದರಲ್ಲದೆ ಹಲವಾರು ಸವಾಲುಗಳನ್ನು ಎದುರಿಸಿ, ಸರ್ವರಂಗಗಳಲ್ಲೂ ಮುಂದೆ ಬರೋಣ ಎಂದು ಕರೆ ನೀಡಿದರು.

ಸಮಾರಂಭದಲ್ಲಿ ಜಿ.ಪಂ.ಮಾಜಿ ಸದಸ್ಯ ಎಂ.ಎಂ.ಜೆ. ಹರ್ಷವರ್ಧನ, ಪ.ಪಂ.ಅಧ್ಯಕ್ಷೆ ಭಾರತಿ ಸುಧಾಕರ ಪಾಟೀಲ್, ಉಪಾಧ್ಯಕ್ಷ ಶಫಿವುಲ್ಲಾ, ಸ್ಥಾಯಿ ಸಮಿತಿ ಅಧ್ಯಕ್ಷ ತೋಟದ ರಾಮಣ್ಣ, ಸದಸ್ಯರುಗಳಾದ ವಿನಯ್ ಹೊಸಮನಿ, ಎಂ.ಸಿ. ಕೆಂಗರಾಜ್, ಕಾಸಲ ಸಾವಿತ್ರಮ್ಮ ಪ್ರಕಾಶ್, ಶೈಲಜಾ ರಾಜೀವ್, ವಿದ್ಯಾ ಮೇಘರಾಜ್, ಹನುಮವ್ವ, ಮುಖಂಡರುಗಳಾದ ಪಿ.ಹೆಚ್. ದೊಡ್ಡರಾಮಣ್ಣ, ಬೂದಿ ಶಿವಕುಮಾರ್, ಐ.ಎಂ. ದಾರುಕೇಶ್, ಅಕ್ಕಿ ತೋಟೇಶ್, ಪವಾಡಿ ಹನುಮಂತಪ್ಪ, ಉಪ ತಹಶೀಲ್ದಾರ್ ನಾಗರಾಜ್, ಕಂದಾಯ ಪರಿವೀಕ್ಷಕ ಎಸ್.ಎಂ.ಹಾಲಸ್ವಾಮಿ, ಸಿಆರ್‌ಪಿ ಅಜ್ಜಪ್ಪ, ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಉಪಪ್ರಾಚಾರ್ಯ ಸಿ.ಬಸವರಾಜ್ ಸ್ವಾಗತಿಸಿದರು. ಶಿಕ್ಷಕ ಮನೋಹರ ಸ್ವಾಮಿ ನಿರೂಪಿಸಿದರು.


## 13ನೇ ವರ್ಷದ ಪುಣ್ಯಸ್ಮರಣೆ



**ದಿ|| ಷಾ ಮಿಶ್ರಿಮಲ್‌ಜಿ ಚುನಿಲಾಲ್‌ಜಿ ಜೈನ್**

ಜನನ : 17.08.1950 ಮರಣ : 16.08.2009

ನೀವು ನಮ್ಮನ್ನಗಲಿ ಇಂದಿಗೆ 13 ವರ್ಷಗಳಾದರೂ ಸದಾ ನಿಮ್ಮ ನೆನಪಿನಲ್ಲಿರುವ,

**ಪತ್ನಿ : ಶ್ರೀಮತಿ ರುಕ್ಮಿಣಿಬಾಯಿ ಮಿಶ್ರಿಮಲ್‌ಜಿ ಜೈನ್**
**ಸಹೋದರರು ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**
**ಷಾ ಚುನಿಲಾಲ್ ತಲಕಾಜಿ ಅಂಡ್ ಕಂಪನಿ**
**ಅರ್ಬುದಾ ಸೇಲ್ಸ್, ಆರ್‌ಕೋ ಪ್ಲೈ,**
**ಪಾತ್ರೆ ವ್ಯಾಪಾರಿಗಳು**
ವಿಜಯಲಕ್ಷ್ಮಿ ರೋಡ್, ದಾವಣಗೆರೆ.
**ದೂರವಾಣಿ : 08192-258655, 94488-38188**


## 'ಸಾದರ ಸಾಧನಾ ಪ್ರಶಸ್ತಿ'ಗೆ ಅರ್ಜಿ

ದಾವಣಗೆರೆ,ಆ.15- ಸಾದರ ನೌಕರರ ಬಳಗದಿಂದ ಪ್ರತಿಭಾವಂತ ಸಾದರ ವಿದ್ಯಾರ್ಥಿಗಳಿಗೆ 'ಸಾದರ ಸಾಧನಾ ಪ್ರಶಸ್ತಿ'ಗೆ ಅರ್ಜಿ ಆಹ್ವಾನಿಸಿದೆ.

ಎಸ್ಸೆಸ್ಸೆಲ್ಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಮತ್ತು ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳು ದೃಢೀಕೃತ ಅಂಕ ಪಟ್ಟಿಯೊಂದಿಗೆ ಇದೇ ದಿನಾಂಕ 18ರ ಒಳಗಾಗಿ, ಕೆ.ನಾಗಪ್ಪ, ಅಧ್ಯಕ್ಷರು, ಸಾದರ ನೌಕರರ ಬಳಗ, ನಂ.1645/145, ವಿದ್ಯಾನಗರ ಮುಖ್ಯರಸ್ತೆ, ದಾವಣಗೆರೆ, ಇವರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ: 9844369744, 9448439662,9844501366,9243312478,9886339984.

## ಮಲೇಬೆನ್ನೂರಿನಲ್ಲಿ ಇಂದು ಪುರಸಭೆ ಸದಸ್ಯರಿಗೆ ಸನ್ಮಾನ

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಇಂದು ಬೆಳಿಗ್ಗೆ ಗಂಟೆಗೆ ಸ್ವಾತಂತ್ರ್ಯದ ಅಮೃತ ಮಹೋತ್ಸವ, ರಕ್ಷಾ ಬಂಧನ ಮತ್ತು ಶ್ರೀ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮ ಮತ್ತು ಪುರಸಭೆಯ ನೂತನ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಜಯೋಗಿನಿ ಬಿ.ಕೆ. ಮಂಜುಳಾಜೀ ತಿಳಿಸಿದ್ದಾರೆ.


## ಬಾವಿಹಾಳ್ ಉಜ್ಜ್ಯೋಳರ ಚಂದ್ರಪ್ಪ ನಿಧನ



ದಾವಣಗೆರೆ ತಾಲ್ಲೂಕು ಬಾವಿಹಾಳ್ ಗ್ರಾಮದ ವಾಸಿ
**ಉಜ್ಜ್ಯೋಳರ ಬಿ.ಯು ಚಂದ್ರಪ್ಪ**
ಇವರು ದಿನಾಂಕ 15.8.2022ರ ಸೋಮವಾರ ಮಧ್ಯಾಹ್ನ 2.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 74 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16.8.2022ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಮೊ : 97381 99365**



## ಮೂಲೆಮನಿ ಬಿ. ಶಿವಲಿಂಗಪ್ಪ ನಿಧನ



ದಾವಣಗೆರೆ ಎಂ.ಸಿ.ಸಿ 'ಬಿ' ಬ್ಲಾಕ್ ಗುಂಡಿ ಸ್ಕೂಲ್ ಪಕ್ಕದ ವಾಸಿ, ಸಿ.ಜಿ ಆಸ್ಪತ್ರೆ ನಿವೃತ್ತ ನೌಕರರಾದ ದಿ|| ಮೂಲೆಮನಿ ಬಿ. ಶಿವಲಿಂಗಪ್ಪ ಅರಳಿಕಟ್ಟೆ (71) ಅವರು ದಿನಾಂಕ: 15.8.2022 ರ ಸೋಮವಾರ ಸಂಜೆ 4.30 ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರಿ, ಇಬ್ಬರು ಪುತ್ರರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 16.8.2022ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಶಾಮನೂರು ವೀರಶೈವ ರುದ್ರಭೂಮಿಯಲ್ಲಿ (ಗ್ಲಾಸ್ ಹೌಸ್ ಪಕ್ಕ) ನೆರವೇರಲಿದೆ.


# ರಾಷ್ಟ್ರಧ್ವಜದ ಜೊತೆ ಐದು ಕೋಟಿ ಜನರು ಸೆಲ್ಫಿ

ನವದೆಹಲಿ, ಆ. 15 – ಪ್ರತಿ ಮನೆ ಮೇಲೂ ರಾಷ್ಟ್ರಧ್ವಜ ಹಾರಿಸಲು ಕೇಂದ್ರ ಸರ್ಕಾರ ನೀಡಿದ್ದ ಕರೆಗೆ ಉತ್ತಮ ಸ್ಪಂದನೆ ದೊರೆತಿದೆ. ಐದು ಕೋಟಿಗೂ ಹೆಚ್ಚು ಜನರು ಹರ್ ಘರ್ ತಿರಂಗ ವೆಬ್ ತಾಣದಲ್ಲಿ ರಾಷ್ಟ್ರಧ್ವಜದ ಜೊತೆ ಸೆಲ್ಫಿ ತೆಗೆಸಿಕೊಂಡ ಚಿತ್ರಗಳನ್ನು ಹಂಚಿಕೊಂಡಿದ್ದಾರೆ ಎಂದು ಕೇಂದ್ರ ಸಂಸ್ಕೃತಿ ಸಚಿವಾಲಯ ತಿಳಿಸಿದೆ.

ಪ್ರತಿ ಮನೆ ಮೇಲೂ ರಾಷ್ಟ್ರಧ್ವಜ ಹಾರಿಸುವಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜುಲೈ 22ರಂದು ಕರೆ ನೀಡಿದ್ದರು. ಸೋಮವಾರ ಸಂಜೆ 4 ಗಂಟೆಯವರೆಗೆ 5 ಕೋಟಿಗೂ ಹೆಚ್ಚು ಜನರು ವೆಬ್ ತಾಣದಲ್ಲಿ ತ್ರಿವರ್ಣ ಧ್ವಜದ ಜೊತೆಗಿನ ಸೆಲ್ಫಿ ಹಂಚಿಕೊಂಡಿದ್ದಾರೆ ಎಂದು ಕೇಂದ್ರ ಸಂಸ್ಕೃತಿ ಸಚಿವಾಲಯ ಹೇಳಿದೆ. ಕೇಂದ್ರ ಸರ್ಕಾರ ಈ ಅಭಿಯಾನಕ್ಕಾಗಿ www.harghartiranga.com ವೆಬ್ ತಾಣ ಆರಂಭಿಸಿತ್ತು.

# ಕಾರ್ಮಿಕರು, ಕುಶಲಕರ್ಮಿಗಳಿಗೆ ಕೊಡುಗೆ

**(1ನೇ ಪುಟದಿಂದ)** ಆದ್ಯತೆಯಾಗಿರಿಸಿಕೊಂಡು, ಅಗತ್ಯವನ್ನಾಧರಿಸಿ, ರಾಜ್ಯದಲ್ಲಿ ಹೊಸದಾಗಿ 4,050 ಅಂಗನವಾಡಿ ತೆರೆಯುವ ಮೂಲಕ 16 ಲಕ್ಷ ಕುಟುಂಬಗಳ ಮಕ್ಕಳಿಗೆ ಪೌಷ್ಟಿಕ ಆಹಾರ ಹಾಗೂ ಶಾಲಾ ಪೂರ್ವ ಶಿಕ್ಷಣ ನೀಡಲು ಅವಕಾಶ ಒದಗಿಸಲಾಗುತ್ತದೆ. ಇದರಿಂದ 8,100 ಮಹಿಳೆಯರಿಗೂ ಉದ್ಯೋಗಾವಕಾಶ ದೊರೆಯಲಿದೆ ಎಂದವರು ತಿಳಿಸಿದರು.

ದೇಶಕ್ಕೆ ಜನತೆಯ ಶ್ರಮ, ಶ್ರದ್ಧೆ, ಅಭಿಮಾನ, ಬೆವರಿನ ಹನಿ ಮುಖ್ಯ. ದೇಶ ಮೊದಲು ಎನ್ನುವ ಭಾವನೆ ಇರಬೇಕು. ದೇಶ ಸ್ವಾಭಿಮಾನದ ಸಂಕೇತ. ನಮ್ಮ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ಮಾಡಬೇಕು ಎಂದರು.

ಎಪ್ಪತ್ತೈದು ವರ್ಷಗಳಾದ ಹಿನ್ನೆಲೆಯಲ್ಲಿ ಹಿಂದಿರುಗಿ ನೋಡಬೇಕು. ನಡೆದು ಬಂದ ಈ ದಾರಿಯಲ್ಲಿನ ಕೊರತೆಗಳನ್ನು ಸರಿಪಡಿಸಿಕೊಂಡು ಅಮೃತ ಕಾಲಕ್ಕೆ ಕೊರತೆಗಳ್ನು ನೀಗಿಸಿ, ಮುಂದೆ ಹೋಗಲು ಸಿಂಹಾವಲೋಕನ, ಆತ್ಮಾವಲೋಕನದ ಅವಶ್ಯಕತೆ ಇದೆ ಎಂದು ಮುಖ್ಯಮಂತ್ರಿ ಇದೇ ಸಂದರ್ಭದಲ್ಲಿ ತಿಳಿಸಿದರು.

ಅಮೃತ ಯೋಜನೆಗಳನ್ನು ಕಳೆದ ಬಾರಿ ಘೋಷಣೆ ಮಾಡಿದ 750 ಗ್ರಾಮ ಪಂಚಾಯತಿಗಳ ಅಭಿವೃದ್ಧಿಗೆ 25 ಲಕ್ಷ ರೂ., ಶಾಲೆಗಳ ಅಭಿವೃದ್ಧಿ, ಎಪ್ಪತ್ತೈದು ಸಾವಿರ ಯುವಕರಿಗೆ ಕೌಶಲ್ಯಾಭಿವೃದ್ಧಿ ಒದಗಿಸಲಾಗಿದೆ ಎಂದವರು ಹೇಳಿದರು.

ಕರ್ನಾಟಕದ 8101 ಶಾಲಾ ಕೊಠಡಿಗಳು ಈ ವರ್ಷವೇ ಪೂರ್ಣಗೊಳ್ಳಲಿವೆ. 100 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಿಹೆಚ್‌ಸಿಗಳಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆ. ಪೌಷ್ಟಿಕ ಆಹಾರಕ್ಕೆ ಒತ್ತು ನೀಡಿದೆ.

ಗ್ರಾಮಗಳಲ್ಲಿ ಸ್ತ್ರೀ ಶಕ್ತಿ ಸಂಘಕ್ಕೆ ಹಣಕಾಸು, ಮಾರುಕಟ್ಟೆ ಸೌಲಭ್ಯ, 4 ಲಕ್ಷ ಮಹಿಳೆಯರಿಗೆ ಉದ್ಯೋಗ ನೀಡಿದ್ದೇವೆ ಎಂದು ತಿಳಿಸಿದರು.

ಕಾರ್ಮಿಕರಿಗೆ, ದೀನ-ದಲಿತರರಿಗೆ ಸ್ವಯಂ ಉದ್ಯೋಗ ಯೋಜನೆ, ಹಿಂದುಳಿದ ವರ್ಗದವರಿಗೆ ಕನಕದಾಸ ವಿದ್ಯಾರ್ಥಿ ನಿಲಯ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ದೀನ್ ದಯಾಳ್ ಉಪಾಧ್ಯಾಯ ಸೌಹಾರ್ದ' ಸಾವಿರ ಕೊಠಡಿಗಳ ಸಾಮರ್ಥ್ಯದ ವಿದ್ಯಾರ್ಥಿ ನಿಲಯ ನಿರ್ಮಿಸಲಾಗುತ್ತಿದೆ ಎಂದು ಹೇಳಿದರು.

ಪ್ರತಿಯೊಬ್ಬ ಹಿರಿಯ ನಾಗರಿಕರಿಗೆ ಕಣ್ಣು ತಪಾಸಣೆ ಮಾಡಿ ಕನ್ನಡಕ ನೀಡುವ ಮೂಲಕ ಕಟ್ಟಕಡೆಯ ವ್ಯಕ್ತಿಗೂ ದೃಷ್ಟಿ ನೀಡುವ ಕೆಲಸ ಪ್ರಾರಂಭಗೊಂಡಿದೆ ಎಂದು ಬೊಮ್ಮಾಯಿ ಹೇಳಿದರು.

ಪ್ರಧಾನಮಂತ್ರಿಗಳು 5 ಟ್ರಿಲಿಯನ್ ಡಾಲರ್ ಆರ್ಥಿಕತೆಯ ಗುರಿ ಹೊಂದಿದ್ದು, ಇದಕ್ಕೆ ಕರ್ನಾಟಕ 1 ಟ್ರಿಲಿಯನ್ ಡಾಲರ್ ಆರ್ಥಿಕತೆ ಕೊಡುಗೆ ನೀಡುವ ವಿಶ್ವಾಸವಿದೆ ಎಂದವರು ತಿಳಿಸಿದರು.



**ಬಾಗಿನ ಸಮರ್ಪಣೆ** ಪಂಚಮಸಾಲಿ ಮಹಿಳಾ ಸಂಘದ ವತಿಯಿಂದ ಹರಿಹರದ ರಾಘವೇಂದ್ರ ಸ್ವಾಮಿ ಮಠದ ತಟದಲ್ಲಿ ಮೈದುಂಬಿ ಹರಿಯುತ್ತಿರುವ ತುಂಗಭದ್ರಾ ನದಿಗೆ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳು ಬಾಗಿನ ಸಮರ್ಪಿಸಿದರು.

# ರಾಜ್ಯ ಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಗೆ ಚಾಲನೆ

ದಾವಣಗೆರೆ, ಆ. 15 - ಕರ್ನಾಟಕ ರಾಜ್ಯ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಮತ್ತು ಸಾಯಿ ಫಿಟ್ನೆಸ್ ಅವರ ಸಹಯೋಗದೊಂದಿಗೆ ನಗರದ ಡಿಸಿಎಂ ಟೌನ್ ಶಿಪ್ ವೃತ್ತದ ಬಳಿಯ ಎಂಎಸ್ ಎಂ ಪ್ಲಾಜಾದಲ್ಲಿ ಶನಿವಾರ ಹಮ್ಮಿಕೊಂಡ ರಾಜ್ಯ ಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಪವರ್ ಲಿಫ್ಟಿಂಗ್ ಕ್ರೀಡಾಳುಗಳು ತಮ್ಮ ಶಕ್ತಿಯ ಬಲವನ್ನು ಪ್ರದರ್ಶಿಸಿದರು.

ನಗರಸಭೆ ವ್ಯಾಯಾಮ ಶಾಲೆಯ ತರಬೇತುದಾರ ಎಂ. ದುಗ್ಗಪ್ಪ ಅವರು ಈ ಸ್ಪರ್ಧೆಗಳಿಗೆ ಚಾಲನೆ ನೀಡಿ, ಸ್ಪರ್ಧಾಳುಗಳಿಗೆ ಶುಭಹಾರೈಸಿದರು.

ಈ ವೇಳೆ ಮಾತನಾಡಿದ ಅವರು, ಯುವ ಕ್ರೀಡಾ ಪಟುಗಳು ಯಾವುದೇ ದುಶ್ಚಟಗಳಿಗೆ ದಾಸರಾಗದೇ ಹೆಚ್ಚಿನ ಸಾಧನೆಗೆ ಹೆಜ್ಜೆ ಹಾಕಬೇಕು. ಆ ಮುಖೇನ ನಮ್ಮ ದೇಶ ಮತ್ತು ರಾಜ್ಯದ ಗೌರವ, ಕೀರ್ತಿ ಹೆಚ್ಚಿಸಬೇಕು ಎಂದು ಆಶಿಸಿದರು.




ಪವರ್ ಲಿಫ್ಟಿಂಗ್ ಸಹ ನಿಮ್ಮ ಶಕ್ತಿ ಸಾಮರ್ಥ್ಯವನ್ನು ತೋರ್ಪಡಿಸುತ್ತದೆ. ಹಾಗಂತ ನಿಯಮ, ಮುಂಜಾಗ್ರತೆ ಮೀರಿ ದೇಹ ಬೆಳೆಸುವ, ಸ್ಪರ್ಧೆಯಲ್ಲಿ ಪ್ರದರ್ಶಿಸುವ ಕೆಲಸ ಮಾಡಬಾರದು. ಕ್ರೀಡಾ ಮನೋಭಾವದಿಂದ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು. ಆರೋಗ್ಯಕರ ಪ್ರದರ್ಶನ ನೀಡಿ ಎಂದು ಸಲಹೆ ನೀಡಿದರು.

ದಾ ವ ಣ ಗೆ ರೆ , (5ನೇ ಪುಟಕ್ಕೆ)

# ಮೂಲ ಸಂಸ್ಕೃತಿ ಉಳಿದಿರುವುದು ಹಾಲುಮತ ಸಮಾಜದಿಂದ

## ಹರಪನಹಳ್ಳಿ: ಹಾಲುಮತ ಧರ್ಮಪ್ರಚಾರ ಯಾತ್ರೆಗೆ ಚಾಲನೆ ನೀಡಿದ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ

ಹರಪನಹಳ್ಳಿ, ಆ.15- ಮೂಲ ಬುಡಕಟ್ಟು ಸಂಸ್ಕೃತಿ ಉಳಿದಿರುವುದು ಹಾಲುಮತ ಸಮಾಜದಿಂದ ಪಾರ್ವತಿ-ಪರಮೇಶ್ವರರಿಂದ ಉದಯವಾದ ಹಾಲುಮತ ಸಮಾಜಕ್ಕೆ 3 ಸಾವಿರ ವರ್ಷಗಳ ಇತಿಹಾಸವಿದೆ ಎಂದು ಕನಕ ಗುರುಪೀಠ ತಿಂತಿಣಿ ಶಾಖಾಮಠದ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ಪಟ್ಟಣದ ಕುರುಬಗೇರಿಯಲ್ಲಿ ಶ್ರಾವಣ ಮಾಸದ ಪ್ರಯುಕ್ತ ಹಾಲುಮತ ಧರ್ಮಪ್ರಚಾರ ಯಾತ್ರೆಗೆ ಡೊಳ್ಳು ಭಾರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಭಂಡಾರ, ಕಂಬಳಿ, ಡೊಳ್ಳು ಇವುಗಳು ಹಾಲುಮತ ಸಮಾಜದ ಸಂಕೇತಗಳಾಗಿದ್ದು, ಶಿವನ ಕೈಯ್ಯಲ್ಲಿರುವ ಡಮರುಗ ಸಹ ಹಾಲುಮತ ಸಮಾಜದ ಮೂಲ ಡೊಳ್ಳು ಆಗಿತ್ತು, ಹಲವಾರು ಧರ್ಮಗಳು ಪೂರ್ವದಲ್ಲಿ ಹಾಲುಮತ ಸಮಾಜದಲ್ಲಿ ಉದಯವಾಗಿ ಇದೀಗ ಹರಿದು ಹಂಚಿಹೋಗಿವೆ ಎಂದು ಕಳವಳ ವ್ಯಕ್ತಪಡಿಸಿದರು.

ರಾಯಣ್ಣನ ವಂಶದವರಾಗಿ ಹುಟ್ಟಿದ ನಾವುಗಳು ಸ್ವಾಭಿಮಾನಿಗಳಾಗಿ ಬದುಕುತ್ತಿದ್ದೇವೆ. ಎಂದೂ, ಯಾರನ್ನೂ ಕೈಚಾಚಿ ಬೇಡಿದವರಲ್ಲ. ಈ ನಿಟ್ಟಿನಲ್ಲಿ ಸಮುದಾಯದವರು ಸಹ ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ, ಸಂಸ್ಕೃತಿಯನ್ನು ಕಲಿಸುವ ಮೂಲಕ ಸಮಾಜದಲ್ಲಿ ಉನ್ನತ ಮಟ್ಟದಲ್ಲಿ ಗುರುತಿಸಿಕೊಳ್ಳುವಂತೆ ಮಾಡಬೇಕೆಂದು ಕರೆ ನೀಡಿದರು.

ಜಿ.ಪಂ. ಮಾಜಿ ಸದಸ್ಯ ಎಚ್.ಬಿ.ಪರಶುರಾಮಪ್ಪ ಮಾತನಾಡಿ, ಶ್ರಾವಣ ಮಾಸದ ಪ್ರಯುಕ್ತ ಗುರುಗಳು ಪಟ್ಟಣಕ್ಕೆ ಆಗಮಿಸಿದ್ದು, ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಶ್ರೀಗಳಿಗೆ ನಾವು ಯಾವತ್ತು ಬೆಂಬಲ ನೀಡುತ್ತೇವೆ ಎಂದು ಹೇಳಿದರು.



ತಾಲ್ಲೂಕು ಕುರುಬ ಸಮಾಜದ ಅಧ್ಯಕ್ಷ ವಕೀಲ ಬಂಡ್ರಿ ಗೋಣಿಬಸಪ್ಪ ಮಾತನಾಡಿ, ಹಾಲುಮತ ಸಮಾಜಕ್ಕೆ ತನ್ನದೇ ಆದ ಇತಿಹಾಸವಿದ್ದು, ಸಂಗೊಳ್ಳಿ ರಾಯಣ್ಣ, ಅಹಲ್ಯಾಬಾಯಿ ಸೇರಿದಂತೆ ಸಮುದಾಯದ ಅನೇಕ ಮಹನೀಯರು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ ಕೀರ್ತಿ ನಮ್ಮ ಸಮುದಾಯಕ್ಕೂ ಇದೆ. ಹಾಗೇನೇ ಪ್ರಪಂಚದಲ್ಲಿ ಹೆಸರುವಾಸಿಯಾಗಿರುವ ಅಯೋಧ್ಯ ರಾಮಮಂದಿರ ಉಳಿವಿಗಾಗಿ ಅಹಲ್ಯಾಬಾಯಿಯವರ ಪಾತ್ರ ಬಹುಮುಖ್ಯವಾಗಿದೆ. ಆದರೆ ಇವರ ಹೆಸರು ಮಾತ್ರ ಸಮಾಜದಲ್ಲಿ ಗೌಣವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕುರುಬ ಸಮಾಜದ ಮಾಜಿ ಅಧ್ಯಕ್ಷ ವೈ.ಕೆ.ಬಿ.ದುರುಗಪ್ಪ ಮಾತನಾಡಿ, ಕುರುಬ ಸಮುದಾಯವು ಸಂಘಟಿತರಾಗಬೇಕಾದ ಅಗತ್ಯವಿದ್ದು, ಬಹು ಸಂಖ್ಯಾತರಾಗಿರುವ ನಾವುಗಳು ಸೌಲಭ್ಯಗಳನ್ನು ಪಡೆಯಲು ಹಾಗೂ ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಮುಂದುವರೆಯಲು ಇನ್ನು ಸಾಧ್ಯವಾಗುತ್ತಿಲ್ಲ. ನಮ್ಮ ಸಮುದಾಯದ ಮುಖಂಡರು ಯಾವುದೇ ಪಕ್ಷದಲ್ಲಿರಲಿ ನಮ್ಮ ಸಮಾಜ ಅಂಥ ಬಂದಾಗ ಒಗ್ಗಟ್ಟಾಗಿ ಸಮಾಜವನ್ನು ಸಂಘಟಿಸಬೇಕು ಎಂದರು.

ಸಮಾಜದ ಯುವ ಮುಖಂಡ ಹಂಪಾಪಟ್ಟಣ ಶಿವಾನಂದ ಪುರಸಭೆ ಮಾಜಿ ಉಪಾಧ್ಯಕ್ಷ ವಸಂತಪ್ಪ, ತಿಮ್ಮಣ್ಣ ಮಾತನಾಡಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಕುರುಬ ಸಮಾಜದ ಉಪಾಧ್ಯಕ್ಷ ಸಾಬಳ್ಳಿ ಜಂಬಣ್ಣ, ಕಾರ್ಯದರ್ಶಿ ಬಳಿಗನೂರು ಪರಶುರಾಮ್, ಪುರಸಭೆ ಸದಸ್ಯರಾದ ಉದ್ದಾರ ಗಣೇಶ್, ಭರತೇಶ್ ಜೋಗಿನ್ನರ, ಬಂಡ್ರಿ ಪ್ರಕಾಶ್, ಕೊಟ್ರಜ್ಜ, ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಭ್ರಾತೃತ್ವದ ಪ್ರತೀಕ ರಕ್ಷಾ ಬಂಧನ

ದಾವಣಗೆರೆ, ಆ. 15- ರಕ್ಷಾ ಬಂಧನ ಸೋದರ-ಸೋದರಿಯರ ಪವಿತ್ರ ಬಂಧನವನ್ನು ಸಾರುವ ಹಬ್ಬವಾಗಿದೆ ಎಂದು ವನಿತ ಸಮಾಜದ ಅಧ್ಯಕ್ಷರಾದ ಶ್ರೀಮತಿ ಪದ್ಮ ಪ್ರಕಾಶ್ ಅಭಿಪ್ರಾಯಪಟ್ಟರು.

ಪ್ರೌಢಶಾಲಾ ವಿದ್ಯಾರ್ಥಿಗಳಾದ ನೀವು ನಿಮ್ಮ ತಂದೆ-ತಾಯಿಯವರ ಕನಸನ್ನು ನೆರವೇರಿಸಿ, ನಿಮ್ಮನ್ನು ನೀವು ಮರೆತು ಆಧುನಿಕ ತಂತ್ರಜ್ಞಾನದ ಜಾಲ ಮತ್ತು ದುರಭ್ಯಾಸಗಳಿಗೆ ಬಲಿಯಾಗಬೇಡಿ. ಶಾಲೆ ನಿಮಗೆ ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುಂದುವರೆಯಿರಿ. ನೀವು ಓದಿದ ಶಾಲೆಯನ್ನು ಎಂದಿಗೂ ಮರೆಯಬೇಡಿ ಎಂದು ತಿಳಿಸಿದರು.

ನಾವು ಭಾರತದಲ್ಲಿ ಅನೇಕ ಹಬ್ಬಗಳನ್ನು ಆಚರಿಸುತ್ತೇವೆ. 'ಭಾರತಂಲೋಕ ಪೂಜ್ಯಂ'ಪ್ರಪಂಚಕ್ಕೆ ಬೆಳಕು ಕೊಟ್ಟಂತಹ ದೇಶ ನಮ್ಮದು.ಋಷಿಮುನಿಗಳಿಂದ ನಿರ್ಮಾಣವಾದ ಸಂಸ್ಕೃತಿ ನಮ್ಮದು. ನಮ್ಮ ಭಾರತ ಶ್ರೀಮಂತ ರಾಷ್ಟ್ರವಲ್ಲ. ಆದರೂ ಪ್ರಪಂಚವೇ ನಮ್ಮ ಸಂಸ್ಕೃತಿಯನ್ನು ಗೌರವಿಸುತ್ತದೆ ಎಂದರು.

ರಕ್ಷಾ ಬಂಧನದ ಅರ್ಥವೆಂದರೆ ನಾವೆಲ್ಲರೂ ಭಗವಂತನ ಮಕ್ಕಳೆಂದು ತಿಳಿದು ದೈವ ಪಿತೃತ್ವ ಮತ್ತು ಮಾನವ ಭ್ರಾತೃತ್ವವನ್ನು ಆಚರಿಸಿ, ವಿಶ್ವ ಭ್ರಾತೃತ್ವದ ವಿಶಾಲ ಭಾವನೆ ಬೆಳೆಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಲಾಡಳಿತ ಮಂಡಳಿಯ ಅಧ್ಯಕ್ಷರಾದ ಕೆ.ಆರ್. ಸುಜಾತ ಕೃಷ್ಣ ಮಾತನಾಡಿ, ಭಾರತ ಸಂಸ್ಕೃತಿ ಮತ್ತು ಧರ್ಮದಿಂದಲೇ ಉಳಿದಿದೆ. ಕೇವಲ ಅಂಕ ಗಳಿಕೆಯೊಂದೇ ನಮ್ಮ ಉದ್ದೇಶವಾಗದೇ, ಸಂಸ್ಕೃತಿಯನ್ನು ಮತ್ತು ಉತ್ತಮ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕೆಂದು ಹೇಳಿದರು.

ಒಡಹುಟ್ಟಿದವರು ಮಾತ್ರ ಸೋದರ, ಸೋದರಿಯರಲ್ಲ. ಯಾರು ನಮ್ಮನ್ನು ರಕ್ಷಿಸುತ್ತಾರೋ, ಪ್ರೀತಿಯಿಂದ ಕಾಣುತ್ತಾರೋ ಅವರೇ ನಮ್ಮ ಅಣ್ಣತಮ್ಮಂದಿರು, ಅಣ್ಣಾ ಎಂಬ ಪದಕ್ಕೆ ಇರುವ ಶಕ್ತಿ ಎಷ್ಟೆಂದರೆ ಶತ್ರುವೂ ಕೂಡ ಸೋದರನಾಗಿ ಬಿಡುತ್ತಾನೆ. ಅಂತಹ ಪವಿತ್ರವಾದ ಭಾವನೆಯನ್ನು ನೀವೆಲ್ಲರೂ ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು.

ಶಾಲೆಯ 10 ನೇ ತರಗತಿಯ ವಿದ್ಯಾರ್ಥಿನಿಯರು ತಮ್ಮ ಸಹಪಾಠಿ ವಿದ್ಯಾರ್ಥಿಗಳಿಗೆ ರಾಖಿ ಕಟ್ಟುವುದರ ಮೂಲಕ ಸಹೋದರ-ಸಹೋದರಿಯರಾದರು.

ಈ ಕಾರ್ಯಕ್ರಮದಲ್ಲಿ ಶಾಲಾ ಸಹಶಿಕ್ಷಕಿ ಬಿ. ಶ್ರೀದೇವಿ ರಕ್ಷಾ ಬಂಧನದ ವಿಧಿ ವಿಧಾನಗಳನ್ನು ನೆರವೇರಿಸಿದರು.

ಶಾಲಾಡಳಿತ ಮಂಡಳಿ ಕಾರ್ಯದರ್ಶಿ ಎ. ಆರ್.ಉಷಾ ರಂಗನಾಥ್, ಪ್ರಾಂಶುಪಾಲರಾದ ಕೆ.ಎಸ್. ಪ್ರಭುಕುಮಾರ್, ಉಪ ಪ್ರಾಂಶುಪಾಲರಾದ ಜಿ.ಎಸ್ .ಶಶಿರೇಖಾ ಉಪಸ್ಥಿತರಿದ್ದರು. ಶಿಕ್ಷಕಿ ಹೇಮಲತಾ ಸ್ವಾಗತಿಸಿದರು. ಎಸ್.ಎಸ್. ಸಂಗೀತಾ ವಂದಿಸಿದರು. ರಂಜನಿ ಕಾರ್ಯಕ್ರಮ ನಿರೂಪಿಸಿದರು.





# ವಾಕಥಾನ್ ಮೂಲಕ ಹರ್ ಘರ್ ತಿರಂಗ ಅಭಿಯಾನ

**ಭದ್ರಾ ಕಾಲೇಜಿನಲ್ಲಿ ಸಂಭ್ರಮ**

ದಾವಣಗೆರೆ,ಆ. 15- ನಗರದ ಭದ್ರಾ ಪದವಿ ಪೂರ್ವ ಕಾಲೇಜು, ಭದ್ರಾ ಪದವಿ ಕಾಲೇಜು, ಭದ್ರಾ ಸ್ನಾತಕೋತ್ತರ ಕೇಂದ್ರದಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ವಾಕಥಾನ್ ಮೂಲಕ ಹರ್ ಘರ್ ತಿರಂಗ್ ಅಭಿಯಾನ ನಡೆಸಲಾಯಿತು.

ಭದ್ರಾ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಿ. ಚಂದ್ರಪ್ಪ ಹಾಗೂ ಪದವಿ ಕಾಲೇಜಿನ ಪ್ರಾಚಾರ್ಯ ಪ್ರೊ. ಟಿ. ಮುರುಗೇಶ್ ಅಭಿಯಾನಕ್ಕೆ ಚಾಲನೆ ನೀಡಿದರು.

ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳು ಕಾಲೇಜಿನಿಂದ ಗುಂಡಿ ವೃತ್ತಕ್ಕೆ ತೆರಳಿ, ವಿದ್ಯಾನಗರ ರಸ್ತೆ ಮಾರ್ಗವಾಗಿ ಬಾಯ್ಸ್ ಹಾಸ್ಟೆಲ್ ರಸ್ತೆಯಲ್ಲಿ ವಾಕಥಾನ್ ನಡೆಸಲಾಯಿತು. ಈ ವೇಳೆ ಸ್ವಾತಂತ್ರ್ಯದ ಘೋಷಣೆಗಳನ್ನು ಕೂಗುತ್ತಾ ಜನರಲ್ಲಿ ಸ್ವಾತಂತ್ರ್ಯ ಹಾಗೂ ರಾಷ್ಟ್ರಧ್ವಜದ ಮಹತ್ವ ತಿಳಿಸಿಕೊಡಲಾಯಿತು.

ನಗರದ ಸಿದ್ಧವೀರಪ್ಪ ಬಡಾವಣೆ ಮತ್ತು ಆಂಜನೇಯ ಬಡಾವಣೆಯ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಧ್ವಜದ ಮಹತ್ವದ ಬಗ್ಗೆ ಅರಿವು ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯರು, ಬೋಧಕ ವರ್ಗದವರು, ಬೋಧಕೇತರ ಸಿಬ್ಬಂದಿ ಭಾಗವಹಿಸಿದ್ದರು.

# ಭಾರತ್ ಸ್ಕೌಟ್ಸ್, ಗೈಡ್‌ನಲ್ಲಿ ಸ್ವಾತಂತ್ರ್ಯ ದಿನಾಚರಣೆ

ದಾವಣಗೆರೆ, ಆ. 15- ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆಯಿಂದ 75 ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು.

ಜಿಲ್ಲಾ ಮುಖ್ಯ ಆಯುಕ್ತ ಮುರುಘರಾಜೇಂದ್ರ ಜೆ. ಚಿಗಟೇರಿ ಧ್ವಜಾರೋಹಣ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸ್ಕೌಟ್ಸ್ ಆಯುಕ್ತ ಎ.ಪಿ. ಷಡಕ್ಷರಪ್ಪ, ಜಿಲ್ಲಾ ಖಜಾಂಚಿ ಬೂಸ್ನೂರು ವಿಶ್ವನಾಥ್, ಜಿಲ್ಲಾ ಕಾರ್ಯದರ್ಶಿ ಶ್ರೀಮತಿ ರತ್ನ ಜಿಲ್ಲಾ ಮತ್ತು ಶ್ರೀಮತಿ ಶಾಂತ ಯಾವಗಲ್, ಉಪಾಧ್ಯಕ್ಷರು ಶ್ರೀಮತಿ ಮಂಗಳ ವಿಶ್ವನಾಥ್ ಹಾಗೂ ನುರೂಲ್ಲಾ, ಜಿಲ್ಲಾ ಸಹಾಯಕ ಆಯುಕ್ತ ಶಂಕರ್ ನಾಯಕ್, ಅಶೋಕ್ ಕುಮಾರ್ ಮತ್ತು ಶಾಮ್ ಸುಂದರ್, ಕಾಂತಿಲಾಲ್, ವೀರೇಂದ್ರ, ಕೊಟ್ರೇಶ್, ಶ್ರೀಮತಿ ಶಾರದಾ ಮಾಗಾನಹಳ್ಳಿ, ಶ್ರೀಮತಿ ಸುಖವಾನಿ ಜಿಲ್ಲಾ ಜಂಟಿ ಕಾರ್ಯದರ್ಶಿ, ಕೊಟ್ರೇಶ್ ಆಜೀವ ಸದಸ್ಯರು, ಶ್ರೀಮತಿ ಶಿವಬಸಮ್ಮ ಕಲಕೋಟಿ ಫ್ಲಾಕ್ ಲೀಡರ್ ಮತ್ತು ಶ್ರೀಮತಿ ಅಶ್ವಿನಿ, ನವೀನ್ ಯುವ ಸಮಿತಿ ಸದಸ್ಯ ಉಪಸ್ಥಿತರಿದ್ದರು.

# ಮಕ್ಕಳ ನೃತ್ಯ ರೂಪಕಗಳು

**(1ನೇ ಪುಟದಿಂದ)** ಪುಲ್ವಾಮಾ ಮೇಲೆ ಉಗ್ರವಾದಿ ದಾಳಿ ನಡೆಸಿದಾಗ ಸರ್ಜಿಕಲ್ ತಿರುಗೇಟು ನೀಡಿದ್ದನ್ನು ವಿದ್ಯಾರ್ಥಿಗಳು ಕಣ್ಣಿಗೆ ಕಟ್ಟುವ ರೀತಿ ಬಿಂಬಿಸಿದರು. ದೇಶದ ಸಾಂಸ್ಕೃತಿಕ ವೈವಿಧ್ಯತೆ, ಕಳೆದ 75 ವರ್ಷಗಳಲ್ಲಿ ಸಾಧಿಸಿರುವ ಪ್ರಗತಿ ಹಾಗೂ ಕೊರೊನಾ ಎದುರಿಸಿದ ಬಗ್ಗೆಯೂ ವಿದ್ಯಾರ್ಥಿಗಳು ನೃತ್ಯದ ಮೂಲಕ ತಿಳಿಸಿದರು.

ಪುಷ್ಪ ಮಹಾಲಿಂಗಪ್ಪ ಶಾಲೆಯ ಮಕ್ಕಳು ವಂದೇ ಮಾತರಂ, ಜಿಗ್ರಾ ಜಿಗ್ರಾ ಹೈ ಹಾಗೂ ತೇರಿ ಮಿಟ್ಟಿ ಹಾಡುಗಳ ಹಿನ್ನೆಲೆಯೊಂದಿಗೆ ಸೈನಿಕರ ತ್ಯಾಗ - ಬಲಿದಾನ ಕುರಿತ ನೃತ್ಯ ರೂಪಕ ಪ್ರದರ್ಶಿಸಿದರು.

ನಿಂಚನ ಶಾಲೆಯ ಮಕ್ಕಳು ಜೈ ಹೋ ಹಾಡಿನ ಹಿನ್ನೆಲೆಯಲ್ಲಿ ನೃತ್ಯ ರೂಪಕ ಪ್ರದರ್ಶಿಸಿದರು. ಸ್ವಾತಂತ್ರ್ಯ ಹೋರಾಟಗಾರರಿಗೆ ನಮನ ಸಲ್ಲಿಸಿದ ವಿದ್ಯಾರ್ಥಿಗಳು, ಸಾಂಸ್ಕೃತಿ ವೈವಿಧ್ಯತೆಯ ನೃತ್ಯ ಪ್ರದರ್ಶಿಸಿದರು. ಸಾಧಕರ ವೇಷಧಾರಿಯಾಗಿ ಬಂದಿದ್ದ ವಿದ್ಯಾರ್ಥಿಗಳು, ದೇಶಕ್ಕೆ ಕೊಡುಗೆ ನೀಡಿದವರನ್ನು ಸ್ಮರಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸೈನಿಕರ ತ್ಯಾಗ - ಬಲಿದಾನಗಳನ್ನು ಪ್ರಮುಖವಾಗಿ ಬಿಂಬಿಸಲಾಗಿತ್ತು. ಹಿಂದಿ ಜನಪ್ರಿಯ ದೇಶಭಕ್ತಿ ಗೀತೆಗಳನ್ನೇ ಮೂರೂ ಶಾಲೆಗಳ ರೂಪಕದಲ್ಲಿ ಬಿಂಬಿಸಲಾಗಿತ್ತು. ದೃಶ್ಯರೂಪಕದಲ್ಲಿ ಬಳಸಲಾದ ಮಾತುಗಳೂ ಹಿಂದಿಯೇ ಆಗಿತ್ತು.

ಇದೇ ವೇಳೆ ಪೊಲೀಸ್ ಶ್ವಾನ ದಳದಿಂದ ಪ್ರದರ್ಶನ ನೆರವೇರಿತು. ಪೊಲೀಸ್ ಅಧಿಕಾರಿ ಪಿ.ಹೆಚ್. ನಾಗರಾಜ್ ನೇತೃತ್ವದಲ್ಲಿ ಶ್ವಾನಗಳಾದ ಪೂಜಾ, ತುಂಗ ಹಾಗೂ ಸೌಮ್ಯ ಪ್ರದರ್ಶನದಲ್ಲಿ ಭಾಗಿಯಾಗಿದ್ದವು. ಶಿಸ್ತು, ಆರೋಪಿಗಳ ಪತ್ತೆ, ಕದ್ದ ಮಾಲು ಪತ್ತೆ, ಆರೋಪಿಗಳ ಹಿಡಿಯುವುದು ಹಾಗೂ ಬಾಂಬ್ ಪತ್ತೆ ಮಾಡುವ ಬಗ್ಗೆ ಶ್ವಾನಗಳ ಪ್ರದರ್ಶನ ನಡೆಸಲಾಯಿತು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಿದ್ದಗಂಗಾ ಶಾಲೆ ಪ್ರಥಮ ಬಹುಮಾನಕ್ಕೆ ಪಾತ್ರವಾಗಿದೆ. ನಿಂಚನ ಶಾಲೆಗೆ ದ್ವಿತೀಯ ಹಾಗೂ ಪುಷ್ಪ ಮಹಾಲಿಂಗಪ್ಪ ಶಾಲೆಗೆ ತೃತೀಯ ಬಹುಮಾನ ದೊರೆತಿದೆ.

# ಪ್ರಥಮ ಪ್ರಧಾನಿ ನೆಹರು ನೆನೆದ ಮೋದಿ

ನವದೆಹಲಿ, ಆ. 15 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕೆಂಪು ಕೋಟೆಯ ಮೇಲೆ ಮಾಡಿದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಭಾಷಣದಲ್ಲಿ ದೇಶದ ಪ್ರಥಮ ಪ್ರಧಾನಿ ಹಾಗೂ ಕಾಂಗ್ರೆಸ್ ಹಿರಿಯ ನಾಯಕ ಜವಾಹರಲಾಲ್ ನೆಹರು ಅವರನ್ನು ಸ್ಮರಿಸಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಪ್ರಕಟಿಸಿದ್ದ ಜಾಹೀರಾತಿನಲ್ಲಿ ನೆಹರೂ ಅವರ ಚಿತ್ರ ಪ್ರಕಟಿಸದೇ ಇರುವುದು ವಿವಾದಕ್ಕೆ ಕಾರಣವಾಗಿತ್ತು.

ದೇಶದ ಸ್ವಾತಂತ್ರ್ಯಕ್ಕೆ ಕೊಡುಗೆ ನೀಡಿದ ಹತ್ತಾರು ನಾಯಕರನ್ನು ಪ್ರಧಾನಿ ಮೋದಿ ಸ್ಮರಿಸಿದರು. ಇವರಲ್ಲಿ ನೆಹರೂ, ಹಿಂದುತ್ವ ಚಿಂತಕ ವಿ.ಡಿ. ಸಾವರ್ಕರ್, ಸಮಾಜವಾದಿ ನಾಯಕ ರಾಮ್ ಮನೋಹರ್ ಲೋಹಿಯಾ ಹಾಗೂ ಕ್ರಾಂತಿಕಾರಿ ಅಷ್ಫಾಕ್‌ವುಲ್ಲಾ ಖಾನ್ ಸೇರಿದ್ದಾರೆ. ಬುಡಕಟ್ಟು ಹಾಗೂ ಮಹಿಳಾ ಕ್ರಾಂತಿಕಾರಿಗಳ ಕೊಡುಗೆಯನ್ನೂ ಪ್ರಧಾನಿ ಸ್ಮರಿಸಿದ್ದಾರೆ.

ಮಹಾತ್ಮ ಗಾಂಧಿ, ಸುಭಾಷ್ ಚಂದ್ರ ಬೋಸ್, ಬಿ.ಆರ್. ಅಂಬೇಡ್ಕರ್ ಅಂಥವರು ತಮ್ಮ ಜೀವನವನ್ನು ಕರ್ತವ್ಯದ ಹಾದಿಯಲ್ಲಿ ಸವೆಸಿದರು ಎಂದು ಮೋದಿ ಹೇಳಿದ್ದಾರೆ.

ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್, ಶ್ಯಾಮ ಪ್ರಸಾದ್ ಮುಖರ್ಜಿ, ಲಾಲ್ ಬಹದ್ದೂರ್ ಶಾಸ್ತ್ರಿ, ದೀನ್ ದಯಾಳ್ ಉಪಾಧ್ಯಾಯ್, ಜಯಪ್ರಕಾಶ್ ನಾರಾಯಣ, ರಾಮ ಮನೋಹರ್ ಲೋಹಿಯಾ, ಆಚಾರ್ಯ ವಿನೋಬ ಭಾವೆ, ನಾನಾಜಿ ದೇಶಮುಖ್, ಸುಬ್ರಮಣ್ಯ **(5ನೇ ಪುಟಕ್ಕೆ)**

# ಅಮೃತ ಮಹೋತ್ಸವ ದೇಶದ ಬಹುದೊಡ್ಡ ಹಬ್ಬ

## ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆ ಕಾರ್ಯಕ್ರಮದಲ್ಲಿ ಹೆಚ್.ಕೆ. ಲಿಂಗರಾಜ್ ಅಭಿಮತ

ದಾವಣಗೆರೆ, ಆ. 15- ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳ ಹಿನ್ನೆಲೆಯಲ್ಲಿ ಆಚರಿಸುತ್ತಿರುವ ಅಮೃತ ಮಹೋತ್ಸವ ಕಾರ್ಯಕ್ರಮ ದೇಶದ ಬಹುದೊಡ್ಡ ಹಬ್ಬ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಶ್ರಾಂತ ಜಂಟಿ ನಿರ್ದೇಶಕ ಹೆಚ್.ಕೆ. ಲಿಂಗರಾಜ್ ಬಣ್ಣಿಸಿದರು.

ನಗರದ ಕುವೆಂಪು ಕನ್ನಡದ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಭಾರತದ ಸ್ವಾತಂತ್ರ್ಯಕ್ಕಾಗಿ, ತ್ಯಾಗ, ಬಲಿದಾನ ಮಾಡಿದ ಹೋರಾಟಗಾರರ ಸ್ಮರಣ ಸಾಕ್ಷ್ಯಚಿತ್ರ ಹಾಗೂ ದೇಶಭಕ್ತಿ ಪ್ರತಿಬಿಂಬಿಸುವ ನೃತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಯಾವುದೇ ಜಾತಿ, ಧರ್ಮದ ಭೇದವಿಲ್ಲದೆ ಹೋರಾಟ ನಡೆಸಿದ ಫಲವಾಗಿ ಸ್ವಾತಂತ್ರ್ಯ ಲಭಿಸಿದೆ. ಅಂತೆಯೇ ಅದರ ಸಂಭ್ರಮಾ ಚರಣೆಯಲ್ಲೂ ಇಂದು ಜಾತಿ, ಧರ್ಮದ ಭೇದ ಮರೆತು ಎಲ್ಲರೂ ಭಾಗವಹಿಸಬೇಕಿದೆ ಎಂದು ಹೇಳಿದರು.



ಅತಿ ಕಡಿಮೆ ತಾಪಮಾನದಲ್ಲಿ ಜೀವ ಹಂಗು ತೊರೆದು ದೇಶ ರಕ್ಷಣೆಗೆ ನಿಂತ ಸೈನಿಕರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹೆಜ್ಜೆ ಇಟ್ಟಿರುವುದು ಶ್ಲಾಘನೀಯ ಎಂದು ಹೇಳಿದರು.

ಭಾರತ ಸಾಧು-ಸಂತರ ದಾರ್ಶನಿಕರ ಕವಿ ಪುಂಗವರ, ವೀರ ಯೋಧರನ್ನು, ತ್ಯಾಗಿ ಗಳನ್ನು, ಬಲಿ ದಾನಿಗಳನ್ನು ಹಾಗೂ ಮಹಾತ್ಮರನ್ನು ಮುಂತಾದ ಪುಣ್ಯ ಪುರುಷರನ್ನು ಕೊಟ್ಟಂತಹ ದೇಶ. ಇದು ನಮ್ಮೆಲ್ಲರ ಹೆಮ್ಮೆ ಎಂದರು.

ದೇಶಪ್ರೇಮ ಮೆರೆಯುವ ಹಾಗೂ ನೃತ್ಯೋತ್ಸವ ಕಾರ್ಯಕ್ರಮದ ಮೂಲಕ ಸ್ವಾತಂತ್ರ್ಯ ಹೋರಾಟಗಾರರನ್ನು, ಹೋರಾಟದ ಕೆಲವು ಸನ್ನಿವೇಶಗಳನ್ನು ಬಿಂಬಿಸುವ ದೃಶ್ಯಗಳನ್ನು ಮತ್ತೊಮ್ಮೆ ಕಣ್ಣಿಗೆ ಕಟ್ಟುವಂತೆ ನೆನಪಿಸಿ ಕೊಡುವಲ್ಲಿ ಜಿಲ್ಲಾ ಕಸಾಪ ಯಶಸ್ವಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಯಾಗಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ಮಾತನಾಡುತ್ತಾ, ಜಿಲ್ಲೆಯ ಸ್ವಾತಂತ್ರ ಹೋರಾಟಗಾರರಾದ ಹಳ್ಳೂರು ನಾಗಪ್ಪ, ಹಮಾಲಿ ತಿಮ್ಮಣ್ಣ, ಮಾಗಾನಹಳ್ಳಿ ಹನುಮಂತಪ್ಪ, ಅಕ್ಕಸಾಲಿಗರ ವಿರೂಪಾಕ್ಷಪ್ಪ, ಹದಡಿ ನಿಂಗಪ್ಪ ಮುಂತಾದವರ ಹೋರಾಟವನ್ನು ನೆನಪಿಸಿ ಅವರಿಗೆ ಗೌರವ ಸಲ್ಲಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ವಿನೂತನವಾಗಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮಾಜಿ ಸೈನಿಕರಾದ ಎಸ್.ವಿ. ಪ್ರವೀಣ್ ದಾವಣಗೆರೆ ಅವರನ್ನು ಅಭಿನಂದಿಸಿ ಸನ್ಮಾನಿಸಲಾಯಿತು. ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ.ದಿಳ್ಯಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಸಾಪ ಮಾಜಿ ಅಧ್ಯಕ್ಷ ಎ.ಆರ್. ಉಜ್ಜನಪ್ಪ, ಬಿಇಒ ಎನ್. ನಿರಂಜನಮೂರ್ತಿ ಉಪಸ್ಥಿತರಿದ್ದರು.

ಜಿಲ್ಲಾ ಕಸಾಪ ಪದಾಧಿಕಾರಿಗಳಾದ ಜ್ಯೋತಿ ಉಪಾಧ್ಯಾಯ, ಎಸ್ಎಂ ಮಲ್ಲಮ್ಮ, ಸತ್ಯಭಾಮ ಭಾಗವಹಿಸಿದ್ದರು. ರುದ್ರಾಕ್ಷಿಬಾಯಿ ಪ್ರಾರ್ಥಿಸಿದರು. ಕಾರ್ಯಾಲಯದ ಕಾರ್ಯದರ್ಶಿ ಸಿ.ಜಿ. ಜಗದೀಶ್ ಕೂಲಂಬಿ ಸ್ವಾಗತಿಸಿದರು. ರೇವಣಸಿದ್ದಪ್ಪ ಅಂಗಡಿ ಕಾರ್ಯಕ್ರಮ ನಿರೂಪಿಸಿದರು. ಭೈರೇಶ್ವರ ವಂದಿಸಿದರು.

# ವೀರಭದ್ರೇಶ್ವರ ದೇವಸ್ಥಾನದ ಸ್ವಚ್ಛತೆ ಮಾಡಿದ ಧರ್ಮಸ್ಥಳ ಯೋಜನಾ ಸಿಬ್ಬಂದಿ



ಮಲೇಬೆನ್ನೂರು, ಆ.15- ಪಟ್ಟಣದ ಹೊರ ವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನವನ್ನು ಶುಕ್ರವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ಕಚೇರಿಯ ಸಿಬ್ಬಂದಿ ಹಾಗೂ ಮೇಲ್ವಿಚಾರಕರು ಸೇರಿ ಸ್ವಚ್ಛತಾ ಕಾರ್ಯವನ್ನು ಕೈಗೊಂಡರು.

ಸುಮಾರು 5 ತಾಸು ಇಡೀ ದೇವಸ್ಥಾನವನ್ನು ಸೋಪ್ ಆಯಿಲ್ ಬಳಸಿ ಸ್ವಚ್ಛವಾಗಿ ತೊಳೆದರು.

ಧರ್ಮಸ್ಥಳ ಯೋಜನೆಯ ಸಿಬ್ಬಂದಿಗಳ ಈ ಕಾರ್ಯವನ್ನು ದೇವಸ್ಥಾನ ಟ್ರಸ್ಟ್ ಉಪಾಧ್ಯಕ್ಷ ಬಿ.ಚಿದಾನಂದಪ್ಪ ಶ್ಲಾಘಿಸಿದರು.

ಯೋಜನಾಧಿಕಾರಿ ವಸಂತ್ ದೇವಾಡಿಗ ಅವರ ನೇತೃತ್ವದಲ್ಲಿ ನಡೆದ ಸ್ವಚ್ಛತಾ ಕಾರ್ಯದಲ್ಲಿ ಕಚೇರಿಯ ಲೆಕ್ಕ ಪರಿಶೋಧಕ ಚಿದಂಬರ, ಕೃಷಿ ಮೇಲ್ವಿಚಾರಕ ಗಂಗಾಧರ್, ಜ್ಞಾನ ವಿಕಾಸ ಸಮಾನ್ವಯಾಧಿಕಾರಿ ರಕ್ಷಿತಾ, ಸಿಎಸ್‌ಸಿ ನೋಡಲ್ ಅಧಿಕಾರಿ ಮಂಜಪ್ಪ, ವಲಯ ಮೇಲ್ವಿಚಾರಕರಾದ ಪದ್ಮಾವತಿ, ಸಂಪತ್ತು ಲಕ್ಷ್ಮಿ, ನಂದಾ, ಚಂದ್ರಪ್ಪ, ಪ್ರಕಾಶ್ ರಾಥೋಡ್, ರವೀಂದ್ರ, ಶಾರದಾ, ಕಚೇರಿಯ ಹಣಕಾಸು ಪ್ರಬಂಧಕ ಆಶಾ, ಆಡಳಿತ ಪ್ರಬಂಧಕ ರಾಕೇಶ್, ಕಚೇರಿಯ ಸಹಾಯಕರಾದ ಪೂಜಾ, ಅನ್ನಪೂರ್ಣ, ಅನುಷಾ, ಮಂಜು, ಭವ್ಯ, ಹನುಮಂತಪ್ಪ, ನಗದು ಸಹಾಯಕರಾದ ರೇಷ್ಮಾ, ಶಿಲ್ಪಾ, ಶಿವರಾಜ್, ಜಿ.ಜಿ.ದೇವರಾಜ್, ಕೊಟ್ರೇಶ್, ಸೇವಾ ಪ್ರತಿನಿಧಿಗಳಾದ ಮಂಜುಳಾ, ಶಾಂತಮ್ಮ, ಊರ್ವಶಿ, ಕೌಸಲ್ಯ, ಸುನೀತಾ, ಲಕ್ಷ್ಮಿ, ದೇವಸ್ಥಾನದ ಜಗದೀಶ್, ಸಾಕಮ್ಮ ಭಾಗವಹಿಸಿದ್ದರು.

# ಸಂಸ್ಕೃತಿ, ಸಂಸ್ಕಾರವಿದ್ದರೆ ಮಾತ್ರ ಗುರುವಿನ ದಯೆ




**ಭರಮಸಾಗರ : ಪವಮಾನ ಪ್ರತಿಷ್ಠಾನದ ಕಾರ್ಯಕ್ರಮದಲ್ಲಿ ಹಿರಿಯ ಮುತ್ಸದ್ಧಿ ಪುಟ್ಟಮ್ಮ ಪ್ರತಿಪಾದನೆ**

ಭರಮಸಾಗರ, ಆ. 15- ಉತ್ತಮ ಸಂಸ್ಕಾರ ಸಂಸ್ಕೃತಿಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಗುರು-ಹಿರಿಯರಲ್ಲಿ ಭಕ್ತಿ ಭಾವದಿಂದ ತಮ್ಮ ತಂದೆ, ತಾಯಿಯವರನ್ನು ನೋಡಿಕೊಳ್ಳಬೇಕೆಂದು ಸ್ಥಳೀಯ 94 ವರ್ಷದ ಹಿರಿಯರಾದ ಶ್ರೀಮತಿ ಪುಟ್ಟಮ್ಮ ಹೇಳಿದರು.

ಸ್ಥಳೀಯ ಪವಮಾನ ಪ್ರತಿಷ್ಠಾನದ ವತಿಯಿಂದ ಶ್ರಾವಣ ಸಂಭ್ರಮದ ಹಬ್ಬದ ಪ್ರಯುಕ್ತ ಹಿರಿಯ ಜೀವಿಗಳು ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಮಕ್ಕಳಿಗೆ ಸಂಪ್ರದಾಯ, ಹಿರಿಯರಿಗೆ ಗೌರವಿಸುವುದು ಬಹಳ ಮುಖ್ಯ. ಇಂತಹ ಸಣ್ಣ ಊರಿನಲ್ಲಿ ಸಂಘಟನೆ ಮಾಡುವುದು ಕಷ್ಟಕರ ಕೆಲಸ. ಅದರಲ್ಲೂ ಸಹ ಇಂತಹ ಕಾರ್ಯಕ್ರಮವನ್ನು ಮಾಡಿರುವುದು ನನಗೆ ತುಂಬಾ ಸಂತೋಷ ತಂದಿದೆ ಇಂತಹದರಲ್ಲಿ ನನ್ನನ್ನು ಕರೆದು ಗೌರವಿಸುವುದು ಸಂತೋಷದ ಸಂಗತಿ. ಇದೆ ರೀತಿ ಇನ್ನೂ ಉತ್ತಮ ಕಾರ್ಯಕ್ರ ಮಗಳನ್ನು ಮಾಡಿ ಜನರ ಪ್ರೀತಿಗೆ ಪಾತ್ರರಾಗಿ ಎಂದು ಹಾರೈಸಿದರು.

ಗಾಯತ್ರಿ ಹೋಮದ ಸ್ವಾಗತ ಸಮಿತಿ ಅಧ್ಯಕ್ಷ ಎಸ್. ಗುರುರಾಜ ರಾವ್, ಸ್ಥಳೀಯ ಧಾರ್ಮಿಕ ಚಿಂತಕ ರಾದ ಬಿ.ದತ್ತಾತ್ರಿ, ನಂತರ ಸ್ಥಳೀಯ ದತ್ತ ಮಂದಿರದ ವ್ಯವಸ್ಥಾಪಕ ಬಿ.ಮಲ್ಲಾರಿ ರಾವ್, ಶ್ರೀಮತಿ ವೀಣಾ ನಂಜುಂಡಯ್ಯ, ಶ್ರೀಮತಿ ಭಾರತಿ, ಡಾ. ರಜನಿ ಅವರುಗಳು ಮಾತನಾಡಿದರು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಶ್ರೀಮತಿ ಜಯಮ್ಮ, ಶ್ರೀ ಭವಾನಿ ನೀಲಕಂಠೇಶ್ವರ ದೇವಸ್ಥಾನ ವ್ಯವಸ್ಥಾಪಕ, ಹುಲ್ಲೂರು ಮನೆತನದ ಹೆಚ್.ಆರ್. ಕೃಷ್ಣಾ ಜೋಯಿಸ್, ಸರ್ಕಾರಿ ಸಮುದಾಯ ಕೇಂದ್ರದ ನೇತ್ರ ಅಧಿಕಾರಿಗಳಾದ ಡಾ. ರಜನಿ ಅವರುಗಳನ್ನು ಸನ್ಮಾನಿಸಲಾಯಿತು.

ಬೆಂಗಳೂರಿನ ಶ್ರೀಮತಿ ಸತ್ಯವತಿ ಬಿ. ಸೇತು ಮಾಧವ ರಾವ್ ಅವರು ಸಸಿಗೆ ನೀರು ಹಾಕುವುದರ ಮೂಲಕ ಸಭೆಯನ್ನು ಉದ್ಘಾಟಿಸಿದರು.

ಕಾಂಗ್ರೆಸ್ ಮುಖಂಡರಾದ ಪಿ. ಲೀಲಾ ಕೃಷ್ಣ, ಕೆಇಬಿ ನಿವೃತ್ತ ಎಂಜಿನಿಯರ್ ಹೆಚ್.ಆರ್. ನೀಲಕಂಠ ಜೋಯಿಸ್, ಶ್ರೀಮತಿ ವಿಶಾಲಮ್ಮ ಪಾಂಡುರಂಗ, ಚಿತ್ರದುರ್ಗದ ಶ್ರೀಮತಿ ಪರಿಮಳ ಶಾಮ್ ಸುಂದರ್, ರಶ್ಮಿ, ಶ್ರೀಮತಿ ಕುಸುಮ, ಅಕ್ಷತಾ ಅಂಜನ ಉಪಸ್ಥಿತರಿದ್ದರು. ಶ್ರೀಮತಿ ಲತಾ ಶೇಷಗಿರಿ ರಾವ್ ಅವರು ಪ್ರಾರ್ಥಿಸಿದರು. ಹಿರಿಯ ಪತ್ರಕರ್ತರಾದ ಬಿ.ಜೆ. ಅನಂತಪದ್ಮನಾಭ ರಾವ್ ಸ್ವಾಗತಿಸಿದರು, ಪವಮಾನ ಪ್ರತಿಷ್ಠಾನ ಕಾರ್ಯದರ್ಶಿ ಶ್ರೀಮತಿ ವಿಜಯ ಲಕ್ಷ್ಮಿ ಬ್ರಾಹ್ಮಣ ಮುತ್ತೈದೆಯರಿಗೆ ಮಂಗಳ ದ್ರವ್ಯ ನೀಡಿ, ವಂದಿಸಿದರು.

## ಗುಂಪು ಘರ್ಷಣೆ: ನಿಷೇಧಾಜ್ಞೆ

**(1ನೇ ಪುಟದಿಂದ)** ಬಯಸಿದ್ದ ಸ್ಥಳದಲ್ಲಿ ಅಧಿಕಾರಿಗಳು ತ್ರಿವರ್ಣ ಧ್ವಜ ಇರಿಸಿದ್ದಾರೆ.

**ಚೂರಿ ಇರಿತ :** ದುಷ್ಕರ್ಮಿಗಳು ಒಬ್ಬರಿಗೆ ಚೂರಿ ಯಿಂದ ಇರಿದಿದ್ದಾರೆ. ಉಪ್ಪಾರ ಕೇರಿ ಬಡಾವಣೆಯಲ್ಲಿ ಪ್ರೇಮ್ ಸಿಂಗ್ ಎಂಬುವವರಿಗೆ ಚೂರಿ ಇರಿಯಲಾಗಿದೆ. ಇವರು ರಾಜಸ್ಥಾನ ಮೂಲದವರು ಎನ್ನಲಾಗಿದೆ.

**ಕ್ರಮ :** ಈ ಘಟನೆಯ ನಂತರ ಪ್ರತಿಕ್ರಿಯೆ ನೀಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಘಟನೆಯ ಬಗ್ಗೆ ಅಧಿಕಾರಿಗಳು ಕ್ರಮ ತೆಗೆದುಕೊಂಡಿದ್ದಾರೆ. ಯಾರೇ ತಪ್ಪು ಮಾಡಿದ್ದರೂ ಕಠಿಣ ಕ್ರಮಕ್ಕೆ ಆದೇಶ ಮಾಡಿದ್ದೇನೆ ಎಂದಿದ್ದಾರೆ.

ಹೆಚ್ಚಿನ ಪೊಲೀಸರನ್ನು ರವಾನಿಸಲಾಗಿದ್ದು, ಶಾಂತಿ ನೆಲೆಸಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

## ಎಆರ್‌ಜಿಯಲ್ಲಿ ಗ್ರಂಥಾಲಯ ದಿನಾಚರಣೆ



ದಾವಣಗೆರೆ, ಆ. 15 - ನಗರದ ಬಾಪೂಜಿ ವಿದ್ಯಾಸಂಸ್ಥೆಯ ಎ.ಆರ್.ಜಿ ಕಲಾ ಮತ್ತು ವಾಣಿಜ್ಯ ಕಾಲೇಜಿನ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದಿಂದ ಪದ್ಮಶ್ರೀ ಪುರಸ್ಕೃತ ಡಾ. ರಂಗನಾಥನ್ ಅವರ ಜನ್ಮ ದಿನದ ಅಂಗವಾಗಿ ಗ್ರಂಥಪಾಲಕರ ದಿನಾಚರಣೆ ಆಚರಿಸಲಾಯಿತು.

ಇದೇ ಸಂದರ್ಭದಲ್ಲಿ ಗ್ರಂಥಾಲಯದ ವೆಬ್ ಸೈಟನ್ನು ಪ್ರಾಂಶುಪಾಲರಾದ ಪ್ರೊ. ಬಸವರಾಜಪ್ಪ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ನಿವೃತ್ತ ಪ್ರೊ. ಲೋಕೇಶ ರೆಡ್ಡಿ, ಪ್ರೊ. ಅನಿತ ಕುಮಾರಿ, ಪ್ರೊ. ರಶ್ಮಿ, ಡಾ. ತಿಪ್ಪೇಸ್ವಾಮಿ, ಪ್ರೊ. ಕವಿತಾ ಪಾಟೀಲ್, ಪ್ರೊ. ರಮೇಶ್ ಪೂಜಾರ್, ಪ್ರೊ. ಹೀನಾ ಕೌಸರ್, ಪ್ರೊ. ಸೌಮ್ಯ ಮತ್ತು ಗ್ರಂಥಪಾಲಕ ಡಾ. ಚಮನ್ ಅವರು ಹಾಜರಿದ್ದರು.

## ಕೋರ್ಟ್ ಆವರಣದಲ್ಲಿ ಧ್ವಜ ವಿತರಣೆ




ದಾವಣಗೆರೆ, ಆ. 15- ಜಿಲ್ಲಾ ಬಿ.ಜೆ.ಪಿ ಪ್ರಕೋಷ್ಠದ ವತಿಯಿಂದ ಆಜಾದಿಕ ಅಮೃತ ಮಹೋತ್ಸವದ ಪ್ರಯುಕ್ತ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ರಾಷ್ಟ್ರಧ್ವಜವನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ವಕೀಲರ ಸಂಘದ ನಿಕಟಪೂರ್ವ ಉಪಾಧ್ಯಕ್ಷ ಹಾಗೂ ಪ್ರಕೋಷ್ಠದ ಸಂಚಾಲಕ ಹೆಚ್.ದಿವಾಕರ್, ರಾಜ್ಯ ಸಮಿತಿ ಸದಸ್ಯ ಎ.ಸಿ. ರಾಘವೇಂದ್ರ, ಕೆ.ಹೆಚ್. ಧನಂಜಯ, ಹಿರಿಯ ವಕೀಲರಾದ ದೊಗ್ಗಳ್ಳಿ ವಿಜಯಪ್ರಕಾಶ್, ಬಿ.ಎಸ್. ಲಿಂಗರಾಜ್, ಶ್ರೀನಿವಾಸ್, ಅನಿತಾ, ಹುಳ್ಳೇರ್ ಮಂಜುನಾಥ, ಶಿವಯೋಗಪ್ಪ, ಯೋಗೇಶ್, ರೇವಣಸಿದ್ದಪ್ಪ, ಚೌಡಪ್ಪ ಮತ್ತು ಇತರೆ ಅನೇಕ ವಕೀಲರು ಉಪಸ್ಥಿತರಿದ್ದರು.

# ಜನತೆ ಆರೋಗ್ಯ ಕಾಪಾಡುವ ಕಾರ್ಮಿಕರು ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕು

**ಹೊನ್ನಾಳಿ ಕಾರ್ಯಕ್ರಮದಲ್ಲಿ ರಾಜಯೋಗಿನಿ ಬ್ರಹ್ಮಾಕುಮಾರಿ ಜ್ಯೋತಿ ಕಳಕಳಿ**



ಹೊನ್ನಾಳಿ, ಆ. 15- ಊರಿನ ಕೇರಿ ಸ್ವಚ್ಛಗೊಳಿಸಿ ಜನತೆಯ ಆರೋಗ್ಯ ಕಾಪಾಡುವ ಪೌರ ಕಾರ್ಮಿಕರು ತಮ್ಮ ಆಂತರಿಕ ಶುದ್ಧಿಗೂ ಆದ್ಯತೆ ನೀಡುವುದರೊಂದಿಗೆ ಅನೇಕ ದುಶ್ಚಟಗಳಿಂದ ದೂರವಿದ್ದು, ತಮ್ಮ ಕುಟುಂಬ ಜೀವನವನ್ನು ಭದ್ರಗೊಳಿಸಿಕೊಳ್ಳುವಂತೆ ಹೊನ್ನಾಳಿ ರಾಜಯೋಗಿನಿ ಬ್ರಹ್ಮಾಕುಮಾರಿ ಜ್ಯೋತಿ ಅವರು ಹೇಳಿದರು.

ಇಲ್ಲಿನ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಪುರಸಭೆ ಪೌರ ಕಾರ್ಮಿಕರಿಗೆ ಸನ್ಮಾನ ಹಾಗೂ ರಕ್ಷಾ ಬಂಧನ ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿದರು.

ಸಮಾರಂಭವನ್ನು ಉದ್ಘಾಟಿಸಿದ ಪುರಸಭೆ ಅಧ್ಯಕ್ಷ ರಂಗನಾಥ್ ಮಾತನಾಡಿ, ಪೌರ ಕಾರ್ಮಿಕರು ತಮ್ಮ ಕಾರ್ಯವನ್ನು ಯಾರೂ ಗುರುತಿಸುವುದಿಲ್ಲ ಎಂದುಕೊಂಡಿದ್ದವರನ್ನು ಈಶ್ವರೀಯ ವಿಶ್ವವಿದ್ಯಾಲಯವು ತಮ್ಮಗಳ ಕೆಲಸ, ಕಾರ್ಯವನ್ನು ಗುರುತಿಸಿ ನಮ್ಮ ಎದುರಿಗೆ ಸನ್ಮಾನಿಸಿದ್ದು ತಮಗೆ ಹೆಮ್ಮೆ ತಂದಿದೆ. ಪೌರ ಕಾರ್ಮಿಕರು ತಮ್ಮ ಸೇವೆಯಲ್ಲಿ ಮತ್ತಷ್ಟು ಉತ್ಸಾಹ ತರುವಂತೆ ಮಾಡಿದೆ ಎಂದರು.

ಪುರಸಭೆಯ ಮುಖ್ಯಾಧಿಕಾರಿ ವೀರಭದ್ರಯ್ಯ ಮಾತನಾಡಿ, ರಕ್ಷಾಬಂಧನ ಕಾರ್ಯದಿಂದ ಸಹೋದರತ್ವದೊಂದಿಗೆ ಈಶ್ವರೀಯ ವಿಶ್ವವಿದ್ಯಾಲಯವು ಸಮಾನತೆ ಸಾರುತ್ತಿದೆ. 38 ಪೌರ ಕಾರ್ಮಿಕರಲ್ಲಿ ಈ ದಿನ 26 ಕಾರ್ಮಿಕರು ಇಂದು ವಿದ್ಯಾಲಯದಲ್ಲಿ ಸನ್ಮಾನ ಸ್ವೀಕರಿಸಿದ್ದು, ಅವರನ್ನು ಗೌರವಿಸಿದ್ದು ತಮಗೆ ಹೆಚ್ಚು ಹೆಮ್ಮೆ ತಂದಿದೆ ಎಂದು ಬಣ್ಣಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ಪೌರ ಕಾರ್ಮಿಕರನ್ನು ಈಶ್ವರೀಯ ವಿದ್ಯಾಲಯದಿಂದ ರಕ್ಷಾಬಂಧನದೊಂದಿಗೆ ಸನ್ಮಾನಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ರಾಜಯೋಗಿ ಬ್ರಹ್ಮಾಕುಮಾರ ಗುರುನಾಥ ಹೆಗಡೆ ವಹಿಸಿದ್ದರು. ಈಶ್ವರೀಯ ವಿಶ್ವವಿದ್ಯಾಲಯದ ಬಸವರಾಜಪ್ಪ, ಮಲೇಬೆನ್ನೂರು ರುದ್ರಯ್ಯ, ಪೌರ ಸೇವಾ ನೌಕರರ ಸೇವಾದ ಅಧ್ಯಕ್ಷ ಅಂಕಣ್ಣ, ವಿದ್ಯಾಲಯದ ಅಕ್ಕಂದಿರಾದ ದಾಗಿನಕಟ್ಟೆ ಮಂಜುಳ, ಜಯಶೀಲ, ನೇತ್ರಾವತಿ, ಬೆಳಗುತ್ತಿ ಸುಲೋಚನಾ ಇನ್ನಿತರರು ಉಪಸ್ಥಿತರಿದ್ದರು.

# ಅಭಿವೃದ್ಧಿಗಾಗಿ ಬೇಕಿದೆ 'ಪಂಚ ಪಣ'

**(1ನೇ ಪುಟದಿಂದ)** ತಿನ್ನುತ್ತಿದೆ. ಪೂರ್ಣಶಕ್ತಿಯೊಂದಿಗೆ ಇದರ ವಿರುದ್ಧ ಹೋರಾಟ ನಡೆಸಬೇಕಿದೆ. ದೇಶ ಲೂಟಿ ಮಾಡಿದವರು ಆ ಹಣವನ್ನು ವಾಪಸ್ ನೀಡಬೇಕು ಎಂದವರು ಹೇಳಿದರು.

ಭ್ರಷ್ಟಾಚಾರದ ಬಗ್ಗೆ ನಾವು ದ್ವೇಷದ ಭಾವನೆ ಹೊಂದಬೇಕಿದೆ. ಭ್ರಷ್ಟರನ್ನು ಸಾಮಾಜಿಕವಾಗಿ ಕೀಳಾಗಿ ನೋಡಬೇಕಿದೆ ಎಂದು ಮೋದಿ ಹೇಳಿದರು.

ಪಕ್ಷಪಾತ ಹಾಗೂ ವಂಶವಾದದ ಬಗ್ಗೆ ಮಾತನಾಡಿದ ಮೋದಿ, ಇದರಿಂದಾಗಿ ದೇಶದ ಪ್ರತಿಭೆ ಹಾಗೂ ಸಾಮರ್ಥ್ಯಕ್ಕೆ ಹಾನಿಯಾಗಿದೆ. ದೇಶದ ಉಜ್ವಲ ಭವಿಷ್ಯಕ್ಕಾಗಿ ಈ ಪಿಡುಗಿನಿಂದ ಹೊರ ಬರಬೇಕಿದೆ ಎಂದಿದ್ದಾರೆ.

ವೈವಿಧ್ಯತೆಯೇ ಅಂತರ್ಗತವಾದ ಶಕ್ತಿ ಎಂಬುದನ್ನು ನಮ್ಮ ದೇಶ ಸಾಬೀತುಪಡಿಸಿದೆ. ದೇಶಪ್ರೇಮ ಎಂಬ ಬೆಸುಗೆಯಿಂದ ಭಾರತ ಅಚಲವಾಗಿದೆ ಎಂದಿರುವ ಪ್ರಧಾನಿ, ಭಾರತ ಪ್ರಜಾಪ್ರಭುತ್ವದ ತಾಯಿ ಎಂದೂ ಅಭಿಪ್ರಾಯ ಪಟ್ಟಿದ್ದಾರೆ.

2047ರಲ್ಲಿ ಭಾರತದ ಸ್ವಾತಂತ್ರ್ಯಕ್ಕೆ ನೂರು ವರ್ಷಗಳು ತುಂಬುತ್ತವೆ. ಆ ವೇಳೆಗೆ ಸ್ವಾತಂತ್ರ್ಯ ಹೋರಾಟಗಾರರು ಹೊಂದಿದ್ದ ಆಶಯಗಳನ್ನು ಈಡೇರಿಸಲು 'ಪಂಚ ಪ್ರಣ್' (ಐದು ಬದ್ಧತೆ) ಹೊಂದಬೇಕಿದೆ. ಈ ಐದು ಬದ್ಧತೆಗಳೆಂದರೆ : ಅಭಿವೃದ್ಧಿ ಹೊಂದಿದ ಭಾರತ, ವಸಹಾತುಶಾಹಿ ಮನಸ್ಥಿತಿಯಿಂದ ಮುಕ್ತಿ, ನಮ್ಮ ಹೆಗ್ಗಳಿಕೆಯನ್ನು ಹೆಮ್ಮೆಯಿಂದ ಮುಂದುವರೆಸುವುದು, ಒಗ್ಗಟ್ಟಿನ ಬಲ ಹಾಗೂ ನಾಗರಿಕರಾಗಿ ಕರ್ತವ್ಯವನ್ನು ಪ್ರಾಮಾಣಿಕವಾಗಿ ಪಾಲಿಸುವುದು ಎಂದು ತಿಳಿಸಿದ್ದಾರೆ.

ಪ್ರಧಾನ ಮಂತ್ರಿ ಹಾಗೂ ಮುಖ್ಯಮಂತ್ರಿಗಳೂ ಸಹ ಈ ಪಣ ತೊಡಬೇಕು ಎಂದವರು ಹೇಳಿದ್ದಾರೆ.

ಸಹಕಾರಿ ಒಕ್ಕೂಟದ ಬಗ್ಗೆ ನಂಬಿಕೆ ವ್ಯಕ್ತಪಡಿಸಿರುವ ಪ್ರಧಾನಿ ಮೋದಿ, ನಾನು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಕೇಂದ್ರದಲ್ಲಿ ಬೇರೆ ಸರ್ಕಾರವಿತ್ತು. ಆಗಲೂ ಭಾರತ ತಂಡ ಎಂಬ ಸ್ಫೂರ್ತಿಯಿಂದ ಕಾರ್ಯ ನಿರ್ವಹಿಸಿದ್ದೆ ಎಂದಿದ್ದಾರೆ.

ನಾವು ಬೇರೆ ಯೋಜನೆಗಳು, ಬೇರೆ ಕಾರ್ಯನಿರ್ವಹಣಾ ಶೈಲಿ ಹೊಂದಿರುತ್ತೇವೆ. ಆದರೆ, ದೇಶದ ಬಗ್ಗೆ ನಾವು ಹೊಂದಿರುವ ಕನಸುಗಳು ಭಿನ್ನವಲ್ಲ ಎಂದವರು ತಿಳಿಸಿದ್ದಾರೆ.

82 ನಿಮಿಷಗಳ ಕಾಲ ಮಾತನಾಡಿದ ಪ್ರಧಾನಿ, ಲಿಂಗ ಸಮಾನತೆ, ಸಂಶೋಧನೆಗೆ ಉತ್ತೇಜನ ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಆದರೆ, ಈ ಸಂದರ್ಭದಲ್ಲಿ ಪ್ರಧಾನಿ ಯಾವುದೇ ಹೊಸ ಯೋಜನೆ, ಇಲ್ಲವೇ ಅಭಿಯಾನವನ್ನು ಪ್ರಕಟಿಸಲಿಲ್ಲ. ಸ್ವಾತಂತ್ರ್ಯೋತ್ಸವದ ಸಮಯದಲ್ಲಿ ಹೊಸ ಯೋಜನೆ ಪ್ರಕಟಿಸುವುದು ಸಾಮಾನ್ಯ ಪದ್ಧತಿಯಾಗಿದೆ.

ದೇಶವನ್ನು ಉದ್ದೇಶಿಸಿ ಮಾತನಾಡುವುದಕ್ಕೆ ಮುಂಚೆ ಪ್ರಧಾನಿ ಮೋದಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಹೊವಿಟ್ಜರ್ ಬಂದೂಕಿನಿಂದ 21 ಸುತ್ತಿನ ಕುಶಾಲತೋಪು ಸಿಡಿಸಲಾಯಿತು.

# ಜಮೀನು ವಶ ; ರೈತರ ಜೊತೆ ಚರ್ಚೆ : ಭೈರತಿ

**(1ನೇ ಪುಟದಿಂದ)** ನೆರವು ಸಿಕ್ಕಿಲ್ಲ ಎಂಬ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಜಿಲ್ಲಾಡಳಿತದಿಂದ ಯಾರಿಗೂ ಅನ್ಯಾಯ ಆಗುವುದಿಲ್ಲ. ಪ್ರತಿಯೊಬ್ಬರಿಗೂ ಪರಿಹಾರ ತಲುಪಿಸಲಾಗುವುದು ಎಂದರು.

**ತಂದೆ ಅಗಲಿಕೆ ನಡುವೆ ಕಾರ್ಯಕ್ರಮ :** ನನ್ನ ತಂದೆ ಭೈರತಿ ಅಂಜನಪ್ಪ ನಿನ್ನೆ ಭಾನುವಾರ ನಿಧನರಾಗಿದ್ದರು. 75ನೇ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಲುವಾಗಿ ನಿನ್ನೆ ಅವರ ಅಂತ್ಯ ಕ್ರಿಯೆ ಮುಗಿಯುತ್ತಲೇ ದಾವಣಗೆರೆಗೆ ಬಂದಿದ್ದಾಗಿ ಸಚಿವ ಬಸವರಾಜ ಇದೇ ಸಂದರ್ಭದಲ್ಲಿ ಹೇಳಿದರು.

ಜಿಲ್ಲೆಯ ಜನತೆ ಜೊತೆಗಿನ ಅವಿನಾಭಾವ ಸಂಬಂಧ ಮರೆಯಲು ಸಾಧ್ಯವಾಗದು. ಜಿಲ್ಲಾ ಉಸ್ತುವಾರಿ ಸಚಿವನಾಗಿ ಮೂರು ಬಾರಿ ಸ್ವಾತಂತ್ರ್ಯೋತ್ಸವ ಆಚರಿಸಿದ್ದೇನೆ. ಇದಕ್ಕಾಗಿ ಜನತೆಗೆ ಆಭಾರಿಯಾಗಿರುತ್ತೇನೆ ಎಂದು ಸಚಿವ ಭೈರತಿ ಅವರು ಹೇಳಿದರು.

ಜಿಲ್ಲೆ ಹೆಚ್ಚು ಅಭಿವೃದ್ಧಿಯಾಗಬೇಕಿದೆ. ಮುಂದಿನ ಐದಾರು ತಿಂಗಳಲ್ಲಿ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವ ದಿಸೆಯಲ್ಲಿ ಕಾರ್ಯ ನಿರ್ವಹಿಸುತ್ತೇನೆ ಎಂದೂ ಅವರು ತಿಳಿಸಿದರು.

## ವೈ.ಆರ್.ಪಿ. ಕರಾಟೆಗೆ 6 ಸ್ವರ್ಣ ಪದಕ



ದಾವಣಗೆರೆ, ಆ. 15- ಇತ್ತೀಚೆಗೆ ಮಳವಳ್ಳಿಯಲ್ಲಿ ನಡೆದ ರಾಷ್ಟ್ರಮಟ್ಟದ ಓಪನ್ ಕರಾಟೆ ಚಾಂಪಿಯನ್ ಶಿಪ್-2022 ರಲ್ಲಿ ನಗರದ ಶ್ರೀ ಸದ್ಗುರು ಬ್ರಹ್ಮಚೈತನ್ಯ ಮಂದಿರದ ವೈ.ಆರ್.ಪಿ. ಕರಾಟೆ ಸೆಲ್ಫ್ ಡಿಫೆನ್ಸ್ ಸ್ಕೂಲ್‌ನ 9 ವಿದ್ಯಾರ್ಥಿಗಳು ಕತಾ ಹಾಗೂ ಕುಮಿತೆ ವಿಭಾಗದಲ್ಲಿ ಭಾಗವಹಿಸಿ 6 ಸ್ವರ್ಣ, 4 ರಜತ ಹಾಗೂ 6 ಕಂಚಿನ ಪದಕಗಳನ್ನು ಪಡೆದಿದ್ದಾರೆ.

ಇವರಿಗೆ ತರಬೇತುದಾರರಾದ ಎಸ್. ಸೆನ್ಸೈ ಯುವರಾಜ್, ಎಸ್. ಸೆನ್ಸೈ ವಿ. ನಾರಾಯಣ್ ಮತ್ತು ಜಿ. ಸೆನ್ಸೈ ಪ್ರವೀಣ್ ಹಾಗೂ ಮಂದಿರದ ಅಧ್ಯಕ್ಷ ಪಿ.ಸಿ. ಮಹಾಬಲೇಶ್ ಮತ್ತು ಕಾರ್ಯದರ್ಶಿ ಬಿ.ಎಸ್. ಸುಬ್ರಹ್ಮಣ್ಯ ಅಭಿನಂದಿಸಿದ್ದಾರೆ.

## ಶ್ರೀಶೈಲ ಮಠದಲ್ಲಿ ಮಹಾಲಕ್ಷ್ಮಿ ಪೂಜೆ



ದಾವಣಗೆರೆ, ಆ.15- ಪಿ.ಬಿ. ರಸ್ತೆಯಲ್ಲಿರುವ ಶ್ರೀಶೈಲ ಮಠದಲ್ಲಿ ಇಂದು ಶ್ರೀ ವರಮಹಾಲಕ್ಷ್ಮಿ ಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಪಂಚಮಸಾಲಿ ಮಹಿಳಾ ಘಟಕದ ಆಶ್ರಯದಲ್ಲಿ ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯರ 36ನೇ ವರ್ಷದ ಪುಣ್ಯಾರಾಧನೆ ಆಚರಿಸಲಾಯಿತು.

ಎನ್.ಎ. ಮುರುಗೇಶ್, ಕೆ.ಎಂ. ಚನ್ನಬಸವಯ್ಯ, ಕೆ.ಎಂ. ಪರಮೇಶ್ವರಯ್ಯ, ಕೆ.ಬಿ. ಹನುಮಂತಪ್ಪ, ಪಿ.ಜೆ. ರಾಜಶೇಖರ್, ವಾಗೀಶ್ ಆವರಗೊಳ್ಳ, ಎಂ. ಬನ್ನಯ್ಯಸ್ವಾಮಿ, ಕುಮಾರಸ್ವಾಮಿ, ಕುಮಾರಸ್ವಾಮಿ ಗುರುಗೇರಿಮಠ, ಐ.ಎಂ. ಕೊಟ್ರೇಶ್, ಟಿ.ಎಂ. ಮಲ್ಲಿಕಾರ್ಜುನಯ್ಯ, ದ್ರಾಕ್ಷಾಯಣಮ್ಮ, ಮಹಿಳಾ ಘಟಕದ ಸದಸ್ಯರಾದ ಜಿ.ಸಿ. ವಸುಂಧರ, ದ್ರಾಕ್ಷಾಯಣಮ್ಮ ಅಂದಪ್ಪ, ಲತಾ ಯಲವಟ್ಟಿ, ಸುಕನ್ಯಾ, ಸುನೀತ, ಶಶಿಕಲಾ, ರಾಜೇಶ್ವರಿ, ಸುವರ್ಣಮ್ಮ, ಪುಷ್ಪ, ರುದ್ರಮ್ಮ, ಗೌರಮ್ಮ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಮಡಿವಾಳ ಸಂಘದಿಂದ ಪುರಸ್ಕಾರ

ದಾವಣಗೆರೆ, ಆ. 15 - ಶ್ರೀ ಮಡಿವಾಳ ಮಾಚಿದೇವ ಸಂಘದಿಂದ 2021-22 ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ನಾಳೆ ಕೊನೆ ದಿನ. ವಿವರಕ್ಕೆ ಸಂಪರ್ಕಿಸಿ : 9448000077, 9844001462.

## ಜಗಳೂರಿನ ಶಾಸಕರ ನೇತೃತ್ವದಲ್ಲಿ ಬಿಜೆಪಿಯಿಂದ ಬೃಹತ್ ಬೈಕ್ ರ್‍ಯಾಲಿ



ಜಗಳೂರು, ಆ. 15- ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಭಾರತೀಯ ಜನತಾ ಪಾರ್ಟಿ ವತಿಯಿಂದ ಶಾಸಕ ಎಸ್.ವಿ. ರಾಮಚಂದ್ರ ಅವರ ನೇತೃತ್ವದಲ್ಲಿ ಬೃಹತ್ ಬೈಕ್ ರ್‍ಯಾಲಿ ನಡೆಸಲಾಯಿತು.

ಪಟ್ಟಣದ ಅಂಬೇಡ್ಕರ್ ಸರ್ಕಲ್‌ನಿಂದ ಪ್ರಮುಖ ಬೀದಿಗಳಲ್ಲಿ ಬಿಜೆಪಿ ಕಾರ್ಯಕರ್ತರು ಮತ್ತು ಶಾಸಕರು ಬೈಕ್ ರ್‍ಯಾಲಿ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ರಾಮಚಂದ್ರ, ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಪ್ರಧಾನಿ ಮೋದಿ ಅವರ ಕರೆಯ ಮೇರೆಗೆ 'ಹರ್ ಘರ್ ತಿರಂಗ ಅಭಿಯಾನ' ಯಶಸ್ವಿಯಾಗಿ ನಡೆಸಲಾಗುತ್ತಿದೆ. ಪ್ರತಿಯೊಂದು ಮನೆಯ ಮೇಲೂ ತ್ರಿವರ್ಣ ಧ್ವಜವನ್ನು ಹಾರಿಸುವ ಮೂಲಕ ಪ್ರಜೆಗಳು ಸ್ವಾತಂತ್ರ್ಯೋತ್ಸವದ ಸಂಭ್ರಮವನ್ನು ಆಚರಿಸಬೇಕು ಎಂದು ಕರೆ ನೀಡಿದರು.

ಬಿಜೆಪಿ ಮಂಡಲ ಅಧ್ಯಕ್ಷ ಹೆಚ್.ಸಿ. ಮಹೇಶ್ ಮಾತನಾಡಿದರು.


**ಬೇಕಾಗಿದ್ದಾರೆ**
ಹರಿಹರ ಬ್ರಾಂಚ್‌ಗೆ
* ರಿಸೆಪ್ಷನಿಷ್ಟ್ * ಕಂಪ್ಯೂಟರ್ ಟೀಚರ್ * ಇಂಗ್ಲಿಷ್ ಟೀಚರ್
ಯಾವುದೇ ಡಿಗ್ರಿಯಾದರೂ ಸರಿ.
ಫೋ. : 93802 29199

**ಸೈಟುಗಳು ಮಾರಾಟಕ್ಕಿವೆ**
JH ಪಟೇಲ್ ಬಡಾವಣೆಯಲ್ಲಿ, ಶಿವ-ಪಾರ್ವತಿ ಲೇಔಟ್ ನಲ್ಲಿ 50x80 North, 40x84 East, 60x84 East, 35x75 North 40 ಅಡಿ ರೋಡಿಗೆ ಇದೆ. 20x50 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಹೌಸಿಂಗ್ ಬೋರ್ಡ್‌ನಲ್ಲಿ (ಕಮರ್ಷಿಯಲ್ ಆಗುವಂತಹ) 1) 40X60 ಉತ್ತರ 80 ಅಡಿ ರಸ್ತೆಗೆ, 2) 60x78 ಪೂರ್ವ, ದೊಡ್ಡ ಡಬಲ್ ಮೇನ್ ರೋಡ್‌ಗೆ
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409
ಸೈಟ್, ಮನೆ ಮಾರಾಟಕ್ಕೆ, ಕೊಳ್ಳುವುದಕ್ಕೆ ನಮ್ಮಲ್ಲಿ ವಿಚಾರಿಸಿ)

**ನಾರ್ಥ್ ಇಂಡಿಯನ್**
ವೆಜ್ ರೆಸ್ಟೋರೆಂಟ್‌ಗೆ ವೇಟರ್ ಮತ್ತು ಕ್ಲೀನರ್ ಬೇಕಾಗಿದ್ದಾರೆ.
ಸಂಪರ್ಕಿಸಿ :
87488 17276

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63647 83999

**WANTED**
(For Davangere and Harihar)
ACCOUNTANT
(min.1 year experience in tally)-2
Marking executive-1
Send ur resume :
krushiagrotex@gmail.com

**MBBS**
Aspirants Looking For MBBS Admission in Russia With Minimum Criteria and Low Budget, Call or Visit
+91 7022 321 123
Doctors Query Pvt Ltd.,
www.doctorsquery.com

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಚಾಣಕ್ಯ ಮ್ಯಾನ್ ಪವರ್ ಏಜೆನ್ಸಿಯಲ್ಲಿ ವರ್ಕ್ ಫ್ರಮ್ ಹೋಮ್, ಆಫೀಸ್ ವರ್ಕ್, ಟೆಲಿಕಾಲರ್ ವರ್ಕ್‌ಮಾಡಲು ಯುವಕ-ಯುವತಿಯರು ಬೇಕಾಗಿದ್ದಾರೆ
ಸ್ಯಾಲರಿ-8000-12000,
ಫೋ. : 83101 63620

**ಬೇಕಾಗಿದ್ದಾರೆ**
5 ವರ್ಷ GST, IT & TALLY ಅನುಭವವಿರುವ (ಬಿ.ಕಾಂ) ಅಕೌಂಟೆಂಟ್ ಹುದ್ದೆ ಖಾಲಿ ಇದೆ. ಆಸಕ್ತರು ಸಂಪರ್ಕಿಸಿ.
9448132721

**ಬೇಕಾಗಿದ್ದಾರೆ**
ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗೆ ಹಿಂದಿ ಬೋಧಿಸುವ ಶಿಕ್ಷಕರು ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ,
ದೇವರಾಜ ಅರಸು ಬಡಾವಣೆ, 'ಸಿ' ಬ್ಲಾಕ್, 6ನೇ ಕ್ರಾಸ್, ಆರ್.ಟಿ.ಓ. ಕಛೇರಿ ಹಿಂಭಾಗ, ಕೊಂಡಜ್ಜಿ ರಸ್ತೆ, ದಾವಣಗೆರೆ
ಕಾರ್ಯದರ್ಶಿ, ಮೊ. 99640 17729

**HOUSE FOR RENT**
2 BHK FIRST FLOOR #2466/1 SRI NILAYA MCC 'A' BLOCK NEAR BAKESHWARA SCHOOL, DAVANGERE. CONTACT:
80736 31657, 74111 16476

**ಸೈಟುಗಳು ಮಾರಾಟಕ್ಕಿವೆ**
PB ರೋಡ್‌ಗೆ ಹತ್ತಿರ ಶನೇಶ್ವರ ದೇವಸ್ಥಾನದ ಹಿಂಭಾಗದಲ್ಲಿ 30x40, 30x40 West, ಅಕ್ಕ ಪಕ್ಕ 60x40 West ರೇಟ್-1750
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಪೇಷೆಂಟ್ ನರ್ಸಿಂಗ್ -2 ವರ್ಷ
NTC : ನರ್ಸರಿ ಟೀಚರ್ಸ್ ಟ್ರೇನಿಂಗ್
ಗಂಗೋತ್ರಿ ಎಜುಕೇಶನಲ್ ಟ್ರಸ್ಟ್. (ರಿ)
ಲಾಯರ್ ರೋಡ್ ದಾವಣಗೆರೆ.
ಬೇಕಾಗಿದ್ದಾರೆ
ಮಹಿಳಾ ರಿಸೆಪ್ಷನ್. ವೇತನ : 5000 /-
8660235013

**ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ**
ಆಕರ್ಷಕ ಕಮೀಷನ್
ಆಕರ್ಷಕ ಬೋನಸ್
ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ
88619 39467, 97401 53513

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**WANTED**
PART-TIME TEACHERS
Bsc BEd PCM/CBZ.
Attractive salary will be given to right candidates. Apply/ contact to Vinayaka Convent
Kalikadevi road Dvg.
Cell: 9535610817

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್,
ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಮನೆ, ಕಾಂಪ್ಲೆಕ್ಸ್ ಮಾರಾಟಕ್ಕೆ ಇದೆ**
ಬಾಲಾಜಿ ಬಡಾವಣೆಯಲ್ಲಿ 30x50 ಕಾರ್ನರ್ ಸೈಟ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ ಶಾಪಿಂಗ್ ಕಾಂಪ್ಲೆಕ್ಸ್, ಫಸ್ಟ್ ಫ್ಲೋರ್‌ನಲ್ಲಿ 2 ಬೆಡ್ ರೂಂ ಮನೆ ಮಾರಾಟಕ್ಕೆ ಇದೆ.
98448 82366

**Office Work (Ladies Only) Business Development Manager**
www.nextstepz.in
89700 66666, 99645 46667

**ಮನೆ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ**
(ವೆಜ್ ಅಥವಾ ನಾನ್ ವೆಜ್) ಸಮಯ : ಬೆಳಗ್ಗೆ 7.30 ರಿಂದ 12.30ರವರೆಗೆ
ವಿಳಾಸ : ಸಿದ್ದವೀರಪ್ಪ ಬಡಾವಣೆ, 12ನೇ ಕ್ರಾಸ್, ದಾವಣಗೆರೆ.
ಫೋ. : 95384 62028

**ಬೇಕಾಗಿದ್ದಾರೆ**
ಟೆಂಡರ್ ಬಿಡ್ ಮಾಡಲು ನುರಿತ ಅನುಭವವುಳ್ಳವರು ಬೇಕಾಗಿದ್ದಾರೆ. ಸಂಪರ್ಕಿಸಿ :
ಫೋ. : 99009 55173

**ನೇತ್ರ ದಾನ ಶ್ರೇಷ್ಠ ದಾನ**

**CHANGE OF NAME**
I. R. Anajan Kumar (old Name), 9th cross, S.S. Layout, Dvg-04, have changed my name as VIIJJESH KUMMAR (New Name) vide affidavit sworn before Notary H.M. Doddagowdar, Dvg. Dated 03.03.2018

**ADMISSION OPEN 2022**
MBBS
India & Abroad - NEET Required
MCC Screening test must be practice in India
Pharma. D, BSc. Nursing P.B. BSc (N) D. Pharma BPT, B.Pharm
B.Sc., MLT, Cardiac, Perfusion, Agri, Radiology
Conditions Apply
99160 67627, 80501 08120

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**HOME LOANS**
House Purchase Loans, House Mortgage Loans, House Construction Loans, House Sheet Loans, House Tiles Loans, Revenue House Loans, Commercial Loans, Business Loans, Personal Loans, Rural House Loans
Contact : 98455 87805

**ಶಿಕ್ಷಕಿಯರು ಬೇಕಾಗಿದ್ದಾರೆ**
D.Ed-2 B.Ed-2
ಶಿಕ್ಷಕಿಯರು ಬೇಕಾಗಿದ್ದಾರೆ.
ವಿಶ್ವಜ್ಞಾನಿ ಪಬ್ಲಿಕ್ ಶಾಲೆ
S O G ಕಾಲೋನಿ, ದಾವಣಗೆರೆ
96638 69555

**Change of Name**
I Shilpashri (Old Name) Son/Daughter of w/o Santosh C. residing at (permanent address) has changed my name as shilpa I have executed affidavit dated 10.8.22 before the Notary Public/Judicial officer to the said effect. I Shall be known as shilpa (New name) for all purposes in future.
Sd/- (Old Name)

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಉಚಿತ ಥೆರಪಿ**
15 ದಿನಗಳಲ್ಲಿ ನೇರ ಪರಿಹಾರ
ಬಿ.ಪಿ. ಶುಗರ್, ಥೈರಾಯ್ಡ್, ಗ್ಯಾಸ್ಟ್ರಿಕ್, ವೆರಿಕೋಸ್ ವೇನ್, ನರಗಳ ದೌರ್ಬಲ್ಯ, ಬೆನ್ನು, ಸೊಂಟ, ಮಂಡಿನೋವು, ಪಾದದಲ್ಲಿ ಉರಿಗಳಿಗೆ ಪರಿಹಾರ, ಹೋಂ ಡೆಮೋ ಸೌಲಭ್ಯವಿದೆ. (T&C), ದಾವಣಗೆರೆ.
86602 35013

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬಾಡಿಗೆ ಮನೆಗಳು ದೊರೆಯುತ್ತವೆ**
ಸಿದ್ದವೀರಪ್ಪ ಬಡಾವಣೆ 13 ಲಕ್ಷಕ್ಕೆ ಲೀಸ್‌ಗೆ. 3 Bed Room Ground Floor, 3 Bed Room 1st Floor
ಆಂಜನೇಯ ಬಡಾವಣೆಯಲ್ಲಿ
ದಕ್ಷಿತ್ ಐನಳ್ಳಿ ಏಜೆಂಟ್
77955 06795

**WANTED**
Banking sector tele caller (Female Only)
Qualification - Any Degree
No. 2257/5 2nd Floor, MCC `A' Block Beside Togataveera Kalyana Mantapa
96869 56142
Interview time :11 AM

## ಅಮೃತ ಮಹೋತ್ಸವ : ಪಂಜಿನ ಮೆರವಣಿಗೆ



ದಾವಣಗೆರೆ, ಆ.15- ನಗರದ ಸಪ್ತಗಿರಿ ಪದವಿ ಪೂರ್ವ ಕಾಲೇಜಿನ ವತಿಯಿಂದ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಪಂಜಿನ ಮೆರವಣಿಗೆ ನಡೆಸಲಾಯಿತು.

ಹರಳೆಣ್ಣೆ ಕೊಟ್ರಬಸಪ್ಪ ವೃತ್ತದಿಂದ ಸಿದ್ದವೀರಪ್ಪ ಬಡಾವಣೆಯ ಅಮರ್ ಜವಾನ್ ಉದ್ಯಾನದವರೆಗೆ ಮೆರವಣಿಗೆ ನಡೆಯಿತು. ಇಸ್ಕಾನ್‌ನ ಅವಧೂತ್ ಚಂದ್ರಹಾಸ್ ಸ್ವಾಮೀಜಿ, ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಜಿ.ಎಸ್. ಮಂಜುನಾಥ್ ಗಡಿಗುಡಾಳ್, ಪಾಲಿಕೆ ಸದಸ್ಯ ಎ. ನಾಗರಾಜ್, ಹಿಂದೂ ಮಹಾಸಭಾ ಅಧ್ಯಕ್ಷ ಜೊಳ್ಳಿ ಗುರು, ಕಾಲೇಜಿನ ಪ್ರಾಂಶುಪಾಲ ಡಾ. ಮಹಾಂತೇಶ್ ಭಾರತಿ ಹಾಗೂ ಮ್ಯಾನೇಜಿಂಗ್ ಟ್ರಸ್ಟಿ ಸಿ. ರಾಮಮೂರ್ತಿ ಮತ್ತಿತರರು ಮೆರವಣಿಗೆಯಲ್ಲಿ ಪಾಲ್ಗೊಂಡರು.

ಮಂಜುನಾಥ್ ಗಡಿಗುಡಾಳ್ ಮಾತನಾಡಿ, ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾಗಿವೆ. ಎಲ್ಲೆಡೆ ಅಮೃತ ಮಹೋತ್ಸವ ಸಂಭ್ರಮ ಮನೆ ಮಾಡಿದೆ. ದೇಶಕ್ಕೆ ಸ್ವಾತಂತ್ರ್ಯ ಬರಲು ಹೋರಾಟಗಾರರ ತ್ಯಾಗ, ಬಲಿದಾನವೇ ಕಾರಣ. ನಾವೆಲ್ಲರೂ ಮಹನೀಯರನ್ನು ಸ್ಮರಿಸೋಣ ಎಂದು ಹೇಳಿದರು.

ಬ್ರಿಟೀಷರ ಕಪಿಮುಷ್ಠಿಯಿಂದ ಬಿಡಿಸಿಕೊಳ್ಳಲು ಹಲವರ ಬಲಿದಾನವಾಗಿದೆ. ನಿರಂತರವಾಗಿ ನಡೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದವರು ನಮಗೆಲ್ಲಾ ಆದರ್ಶ. ಭಾರತ ದೇಶವನ್ನು ಸಮರ್ಥವಾಗಿ, ಮತ್ತಷ್ಟು ಬಲಿಷ್ಠಗೊಳಿಸಲು ಎಲ್ಲರೂ ಶ್ರಮಿಸೋಣ ಎಂದು ಕರೆ ನೀಡಿದರು.

## ರಾಷ್ಟ್ರ ಧ್ವಜಕ್ಕೆ ಅಪಮಾನ ಆಕ್ರೋಶ, ಕ್ರಮಕ್ಕೆ ಆಗ್ರಹ

ಮಲೇಬೆನ್ನೂರು ಆ. 15 - ಪಟ್ಟಣದಲ್ಲಿ ಯುವಕರ ಗುಂಪೊಂದು ತ್ರಿವರ್ಣ ಧ್ವಜ ವಿರೂಪಗೊಳಿಸಿ ಮೆರವಣಿಗೆ ಮಾಡಿದ ವಿಡಿಯೋ ಹ ರಡಿ 75ನೇ ಸ್ವಾತಂತ್ರ್ಯ ದಿನದಂದು ಕೆಲಕಾಲ ಆತಂಕದ ಪರಿಸ್ಥಿತಿ ನಿರ್ಮಾಣವಾದ ಘಟನೆ ಸೋಮವಾರ ನಡೆಯಿತು.

ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿ ಪಟ್ಟಣದಲ್ಲಿ ಸೂಕ್ತ ಬಂದೋಬಸ್ತ್ ಕೈಗೊಂಡರು. ನಂತರ ಸಾಯಂಕಾಲ ಮಾಜಿ ಶಾಸಕ ಬಿ.ಪಿ. ಹರೀಶ್, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್, ಐರಣಿ ಅಣ್ಣಪ್ಪ , ಪುರಸಭೆ ಸದಸ್ಯರಾದ ಬಿ ಮಂಜುನಾಥ್, ಬೆಣ್ಣೆಹಳ್ಳಿ ಸಿದ್ದೇಶ್, ಪಿ.ಆರ್ ರಾಜು, ಎ.ಕೆ ಲೋಕೇಶ್ ಸೇರಿದಂತೆ ಬಿಜೆಪಿ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಠಾಣೆಗೆ ಆಗಮಿಸಿ ಘಟನೆಗೆ ಕಾರಣರಾದವರ ಮೇಲೆ ಶಿಸ್ತು ಕ್ರಮ ಜರುಗಿಸಲು ಆಗ್ರಹಿಸಿ, ನಿಮ್ಮ ಕೈಯಿಂದ ಆಗದಿದ್ದರೆ ನಾವು ದೇಶ ವಿರೋಧಿಗಳನ್ನು ಪತ್ತೆ ಮಾಡಿ ಶಿಕ್ಷೆ ನೀಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಸಿಪಿಐ ಸತೀಶ್ ಆಗಮಿಸಿ ಪರಿಸ್ಥಿತಿ ಅವಲೋಕಿಸಿದರು. ಆಯ ಕಟ್ಟಿನ ಸ್ಥಳಗಳಿಗೆ ಹೆಚ್ಚಿನ ಪೊಲೀಸ್ ಭದ್ರತೆ ನಿಯೋಜನೆ ಮಾಡಿದರು.

ಎಎಸ್ಪಿ ಕನ್ನಿಕಾ ಅಗರವಾಲ್ ಆಗಮಿಸಿ ಬಿಜೆಪಿ ಮುಖಂಡರೊಡನೆಮಾತುಕತೆನಡೆಸಿದರು.ಕೂಡಲೇ ಪ್ರಕರಣ ದಾಖಲಿಸಿ, ಕ್ರಮಕ್ಕೆ ಆಗ್ರಹಿಸಿದರು. ಪ್ರಕರಣ ದಾಖಲು ಮಾಡಿಕೊಂಡ ಪೊಲೀಸರು ಕೆಲವರನ್ನು ವಿಚಾರಣೆಗೊಳಪಡಿಸಿದ್ದಾರೆನ್ನಲಾಗಿದೆ. ಠಾಣೆ ಎದುರು ಜನತೆ ಜಮಾವಣೆಗೊಂಡು ಕೆಲಕಾಲ ಬಿಗುವಿನ ಪರಿಸ್ಥಿತಿ ನಿರ್ಮಾಣವಾಗಿತ್ತು.

ವಿಶೇಷ ತನಿಖಾ ತಂಡ ರಚಿಸಿದ್ದು, ಅಪರಾಧಿಗಳ ಪತ್ತೆ ಕಾರ್ಯ ಮುಂದುವರೆದಿದೆ. ಕಡಾರನಾಯ್ಕನಹಳ್ಳಿ ಮಹಂತೇಶ್ ಎಂಬುವರು ದೂರು ನೀಡಿದ್ದಾರೆ.

# ಕ್ರಾಂತಿಕಾರಿಗಳಿಂದಲೇ ಭಾರತಕ್ಕೆ ಸ್ವಾತಂತ್ರ್ಯ

## ಬ್ರಿಟಿಷರು ಭಾರತ ಬಿಟ್ಟು ಹೋಗಲು ನೌಕಾ ದಂಗೆ ಕಾರಣ : ರಘುನಂದನ್



ದಾವಣಗೆರೆ, ಆ. 15 – ಭಾರತಕ್ಕೆ ಸ್ವಾತಂತ್ರ್ಯ ಸಿಗಲು ಮಹಾತ್ಮ ಗಾಂಧೀಜಿ ಹಾಗೂ ಕಾಂಗ್ರೆಸ್ ಅಷ್ಟೇ ಕಾರಣವಲ್ಲ, ಕ್ರಾಂತಿಕಾರಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು ಎಂದು ಪ್ರಜ್ಞಾ ಪ್ರವಾಹದ ಕ್ಷೇತ್ರೀಯ ಸಂಯೋಜಕ ರಘುನಂದನ್ ತಿಳಿಸಿದ್ದಾರೆ.

ರಾಷ್ಟ್ರೋತ್ಥಾನ ಬಳಗವದ ವತಿಯಿಂದ ನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ವಿಶೇಷ ಉಪನ್ಯಾಸ ಹಾಗೂ ಪ್ರಬಂಧ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ಗಾಂಧೀಜಿ ಹಾಗೂ ಕಾಂಗ್ರೆಸ್ ಅಹಿಂಸಾತ್ಮಕ ಹೋರಾಟದ ಮೂಲಕ ಸ್ವಾತಂತ್ರ್ಯ ಪಡೆಯುವಲ್ಲಿ ಪ್ರಮುಖ ಕೊಡುಗೆ ನೀಡಿದ್ದಾರೆ. ಆದರೆ, ಗಾಂಧೀಜಿ ಹೇಳಿದರು ಎಂಬ ಕಾರಣಕ್ಕೆ ಬ್ರಿಟಿಷರು ಭಾರತ ಬಿಟ್ಟು ಹೋಗಲಿಲ್ಲ ಎಂದು ರಘುನಂದನ್ ಹೇಳಿದರು.

ಕಾಂಗ್ರೆಸ್ ಸ್ವಾತಂತ್ರ್ಯಕ್ಕಾಗಿ ನಡೆಸಿದ ಕೊನೆಯ ಹೋರಾಟ 1942ರ ಕ್ವಿಟ್ ಇಂಡಿಯಾ ಚಳುವಳಿ, ದೇಶಕ್ಕೆ ಸ್ವಾತಂತ್ರ್ಯ ದೊರೆತಿದ್ದು 1947ರಲ್ಲಿ. ಈ ನಡುವೆ ನೇತಾಜಿ ಸುಭಾಷ್ ಚಂದ್ರ ಬೋಸ್ ನೇತೃತ್ವದಲ್ಲಿ ಐ.ಎನ್.ಎ. ನಡೆಸಿದ ಹೋರಾಟ ಹಾಗೂ ನೌಕಾ ಬಂಡಾಯವೇ ಬ್ರಿಟಿಷರು ಭಾರತ ಬಿಟ್ಟು ಹೋಗಲು ಕಾರಣ ಎಂದವರು ಹೇಳಿದರು.

ಭಾರತೀಯ ಸೈನ್ಯದ ನಿಷ್ಠೆಯ ಕಾರಣದಿಂದ ಬ್ರಿಟಿಷರು ಭಾರತವನ್ನು ಆಳುವುದಷ್ಟೇ ಅಲ್ಲದೇ ವಿಶ್ವದಾದ್ಯಂತ ಯುದ್ಧಗಳಲ್ಲಿ ಗೆಲುವು ಸಾಧಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಭಾರತದ ಸೈನ್ಯವನ್ನೇ ಬ್ರಿಟಿಷರ ವಿರುದ್ಧ ಬಳಸಿಕೊಳ್ಳಲು ನೇತಾಜಿ ಸುಭಾಷ್ ಚಂದ್ರ ಬೋಸ್ ನಿರ್ಧರಿಸಿದರು. ಅವರು ಭಾರತೀಯ ರಾಷ್ಟ್ರೀಯ ಸೈನ್ಯ (ಐ.ಎನ್.ಎ.) ಕಟ್ಟಿದರು. ಐ.ಎನ್.ಎ. ಸೈನಿಕರ ವಿರುದ್ಧ ವಿಚಾರಣೆ ನಡೆಯುತ್ತಿರುವಾಗ, ಅವರನ್ನು ಬೆಂಬಲಿಸಿ ನೌಕಾ ದಳ 1946ರಲ್ಲಿ ದಂಗೆ ಎದ್ದಿತು ಎಂದು ರಘುನಂದನ್ ಹೇಳಿದರು.

ಭಾರತೀಯ ಸೈನ್ಯ ಇನ್ನು ಬ್ರಿಟಿಷರಿಗೆ ನಿಷ್ಠವಾಗಿ ಉಳಿದಿಲ್ಲ ಎಂಬುದು ಆಗಿನ ಪ್ರಧಾನ ಮಂತ್ರಿ ಕ್ಲೆಮೆಂಟ್ ಅಟ್ಲಿ ಅವರಿಗೆ ಅರಿವಾಯಿತು. ಈ ಕಾರಣದಿಂದಲೇ ಭಾರತ ಬಿಟ್ಟು ಹೋಗಲು ಬ್ರಿಟಿಷರು ನಿರ್ಧರಿಸಿದರು ಎಂದು ರಘುನಂದನ್ ಹೇಳಿದರು.

1857ರಲ್ಲಿ ಸಿಪಾಯಿ ದಂಗೆಯ ರೂಪದಲ್ಲಿ ನಡೆದ ಬ್ರಿಟಿಷರ ವಿರುದ್ಧದ ಮೊದಲ ಸ್ವಾತಂತ್ರ್ಯ ಹೋರಾಟದಲ್ಲಿ 3 ಲಕ್ಷ ಜನರು ಹುತಾತ್ಮರಾದರು. ನಂತರ 1947ರಲ್ಲಿ ಸ್ವಾತಂತ್ರ್ಯ ಸಿಗುವವರೆಗೆ ಬ್ರಿಟಿಷರು 1.5 ಲಕ್ಷ ಜನರನ್ನು ಹತ್ಯೆಗೈದಿದ್ದರು. ಇವರೆಲ್ಲರ ಕೊಡುಗೆಯಿಂದಾಗಿಯೇ ಭಾರತಕ್ಕೆ ಸ್ವಾತಂತ್ರ್ಯ ದೊರೆತಿದೆ ಎಂದವರು ಹೇಳಿದರು.

ನಾವು ಸ್ವರಾಜ್ಯಕ್ಕಾಗಿ ಕೇವಲ ಬ್ರಿಟಿಷರ ವಿರುದ್ಧವಷ್ಟೇ ಹೋರಾಟ ನಡೆಸಿಲ್ಲ. 8ನೇ ಶತಮಾನದಲ್ಲಿ ಮೊಹಮ್ಮದ್ ಬಿನ್ ಖಾಸಿಮ್ ಸಿಂಧ್ ಮೇಲೆ ದಾಳಿ ನಡೆಸಿದ ಕಾಲದಿಂದಲೇ ಸ್ವರಾಜ್ಯಕ್ಕಾಗಿ ಹೋರಾಟ ನಡೆಸಲಾಗಿದೆ. 1300 ವರ್ಷಗಳ ದೀರ್ಘ ಹೋರಾಟ ಪ್ರಪಂಚದ ಯಾವುದೇ ಭಾಗದಲ್ಲಿ ನಡೆದಿಲ್ಲ ಎಂದವರು ಹೇಳಿದರು.

ಈಗಿನ ಇರಾನ್ 8ನೇ ಶತಮಾನಕ್ಕೆ ಮುಂಚೆ ಪರ್ಷಿಯಾ ಆಗಿತ್ತು. ಈ ಪ್ರಾಂತ್ಯ ಕೇವಲ 13 ವರ್ಷಗಳಲ್ಲಿ ದಾಳಿಗೆ ತಲೆಬಾಗಿತು. ಆಗ ಅಲ್ಲಿದ್ದ ಪಾರ್ಸಿಗಳು ಸಂಪೂರ್ಣ ಕಣ್ಮರೆಯಾದರು. ಆದರೆ, ಭಾರತದಲ್ಲಿ 1300 ವರ್ಷಗಳ ದಾಳಿಯ ನಂತರವೂ ಸ್ವರಾಜ್ಯ ಉಳಿಸಿಕೊಳ್ಳಲು ಸಾಧ್ಯವಾಗಿದೆ. ಈ ಹೋರಾಟವನ್ನು ಸ್ವಾತಂತ್ರ್ಯದ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು ಎಂದವರು ಹೇಳಿದರು.

ವೇದಿಕೆಯ ಮೇಲೆ ರಾಷ್ಟ್ರೋತ್ಥಾನ ಬಳಗದ ಅಧ್ಯಕ್ಷ ಜಯದೇವ ಹಾಗೂ ಕಾರ್ಯಾಧ್ಯಕ್ಷ ಶಿವಕುಮಾರ್ ಉಪಸ್ಥಿತರಿದ್ದರು.

## ರಾಜ್ಯ ಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಗೆ ಚಾಲನೆ

**(3ನೇ ಪುಟದಿಂದ)** ಹರಿಹರ, ಮಲೆಬೆನ್ನೂರು, ಬೆಳಗಾವಿ, ರಾಣೆಬೆನ್ನೂರು, ಶಿವಮೊಗ್ಗ ಸೇರಿದಂತೆ ರಾಜ್ಯದ ವಿವಿಧೆಡೆಗಳಿಂದ ಸುಮಾರು 60 ಮಂದಿ ಕ್ರೀಡಾಳುಗಳು ಭಾಗವಹಿಸಿ, ತಮ್ಮ ಶಕ್ತಿ ಪ್ರದರ್ಶಿಸಿದರು.

23 ವರ್ಷದೊಳಗಿನ ಜೂನಿಯರ್ ವಿಭಾಗ, 23 ರಿಂದ 40 ವರ್ಷದ ವಯೋಮಾನದ ಸೀನಿಯರ್ ವಿಭಾಗ, 40 ರಿಂದ 70 ವರ್ಷ ವಯಸ್ಸಿನ ಮಾಸ್ಟರ್ಸ್ ವಿಭಾಗವಾಗಿ ಸ್ಪರ್ಧೆ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಅಸೋಸಿಯೇಷನ್ ಉಪಾಧ್ಯಕ್ಷ ಷಣ್ಮುಖಚಾರ್, ಸಾಯಿ ಫಿಟ್ನೆಸ್ ಮಾಲೀಕ, ಅಂತರಾಷ್ಟ್ರೀಯ ಕ್ರೀಡಾಪಟು ಕೆ. ಎಸ್. ಸಾಯಿನಾಥ್, ಎಸ್ ಎಂಎಸ್ ಪ್ಲಾಜಾದ ಮಾಲೀಕ ಶಶಿಧರ್ ಮಳಲಕೆರೆ ಸೇರಿದಂತೆ ಇತರರು ಇದ್ದರು. ಅಸೋಸಿಯೇಷನ್ ಕಾರ್ಯದರ್ಶಿ ಕೆ. ಬಸವರಾಜ್ ಸ್ವಾಗತಿಸಿದರು. ಅಂತರಾಷ್ಟ್ರೀಯ ದೇಹದಾರ್ಢ್ಯ ಕ್ರೀಡಾಪಟು ಅಕ್ರಂಬಾಷಾ ನಿರೂಪಿಸಿದರು. ಅಂತರಾಷ್ಟ್ರೀಯ ಕ್ರೀಡಾಪಟು ಹೆಚ್.ವೈ. ಶಶಿಧರ್ ವಂದಿಸಿದರು.

## ಅಪಘಾತ ರಹಿತ ಚಾಲನೆ ಮಾಡಿದ ಚಾಲಕ ಬಿ.ಬಿ. ಹೂಗಾರ್‌ಗೆ ಸನ್ಮಾನ



ದಾವಣಗೆರೆ, ಆ. 15 - ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ದಾವಣಗೆರೆ ವಿಭಾಗದ ಘಟಕ 2ರಲ್ಲಿ 75 ನೇ ಸ್ವಾತಂತ್ರ ದಿನಾಚರಣೆಯನ್ನು ಆಚರಿಸಲಾಯಿತು. ಘಟಕ ವ್ಯವಸ್ಥಾಪಕ ನೀತಾ ಮಂಜುನಾಥ್ ಧ್ವಜಾರೋಹಣ ನೆರವೇರಿಸಿದರು.

ಘಟಕದ ಹಿರಿಯ ಚಾಲಕ ಬಿ.ಬಿ. ಹೂಗಾರ್‌ರವರು 36 ವರ್ಷಗಳ ಕಾಲ ಅಪಘಾತ ರಹಿತ ಚಾಲನೆ ಮಾಡಿ ಬೆಳ್ಳಿ ಪದಕ ಪಡೆದು ಸಂಸ್ಥೆಯ ಮಾದರಿ ಚಾಲಕರಾಗಿದ್ದು, ಕಳೆದ ವಾರ ನಿವೃತ್ತರಾಗಿದ್ದಾರೆ. ಶಾಂತ ಕುಮಾರ್, ಕೃಷ್ಣಮೂರ್ತಿ, ಸೋಮಗೊಂಡ ಗೋಪಿಕಾಂತ್, ಚೇತನ್ ಕುಮಾರ್, ಮಲ್ಲಮ್ಮ ನಿರ್ದೇಶಕ ಕೆ.ಎಂ. ವೀರಯ್ಯ ಹಾಜರಿದ್ದರು.

## ವನಿತಾ ಯೋಗ ಕೇಂದ್ರದಿಂದ 150 ಅಡಿ ಉದ್ದದ ಧ್ವಜದ ಮೆರವಣಿಗೆ



ದಾವಣಗೆರೆ, ಆ. 15- ನಗರದ ವನಿತಾ ಯೋಗ ಕೇಂದ್ರದಿಂದ ಈ ಬಾರಿ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ದಾವಣಗೆರೆ ಯೋಗ ಸ್ಪಂದನ ಹಾಗೂ ವನಿತಾ ಯೋಗ ಕೇಂದ್ರದ ವತಿಯಿಂದ ಈ ಬಾರಿ ವಿಶೇಷವಾಗಿ 150 ಅಡಿ ಉದ್ದದ ಧ್ವಜವನ್ನು ಸ್ವತಃ ತಾವೇ ತಯಾರಿಸಿ, ಯೋಗ ಕೇಂದ್ರದಲ್ಲಿ ಧ್ವಜಾರೋಹಣದ ನಂತರ ಉದ್ದನೆಯ ಧ್ವಜವನ್ನು ಹಿಡಿದು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ನಗರದ ಜನತೆಯ ಗಮನ ಸೆಳೆದರು.

## ವಿನೋಬನಗರದಲ್ಲಿ 75 ಅಡಿ ಉದ್ದದ ತಿರಂಗ ಯಾತ್ರೆ



ದಾವಣಗೆರೆ, ಆ.15- ವಿನೋಬ ನಗರದಲ್ಲಿ ಚಿನ್ನ-ಬೆಳ್ಳಿ ಕೆಲಸಗಾರರ ಸ್ನೇಹಿತರ ಬಳಗ ಹಾಗೂ ಸಿದ್ಧಗಂಗಾ ಗೆಳೆಯರ ಬಳಗದ ವತಿಯಿಂದ 75 ಅಡಿ ಉದ್ದದ ತಿರಂಗ ಯಾತ್ರೆ ಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ಹಿರಿಯರಾದ ಮಂಜುನಾಥ್ ಅನ್ವೇಕರ್, ವೆಂಕಟೇಶ್ ರಾಯ್ಕರ್, ಜಿಲ್ಲಾ ಬಿಜೆಪಿ ಕಾನೂನು ಪ್ರಕೋಷ್ಟದ ಸಂಚಾಲಕರಾದ ದಿವಾಕರ್ ವಕೀಲರು, ರಾಜ್ಯ ಬಿಜೆಪಿ ಕಾನೂನು ಪ್ರಕೋಷ್ಟದ ಸದಸ್ಯ ಎ.ಸಿ. ರಾಘವೇಂದ್ರ (ವಕೀಲರು), ಜಿಲ್ಲಾ ಭಜರಂಗದಳ ಸಂಚಾಲಕ ಅರುಣ್ ಉಗ್ಗೆಹಳ್ಳಿ, ದೈವಜ್ಞ ಸಮಾಜದ ಯುವ ಮುಖಂಡ ವೆಂಕಟೇಶ್ ಹರ್ಡೇಕರ್, ಅಭಾವಿಪ ಅಧ್ಯಕ್ಷ ಪವನ್ ರೇವಣಕರ್, ಬಿಜೆಪಿ ಯುವ ಮೋರ್ಚಾ ಉತ್ತರದ ಅಧ್ಯಕ್ಷ ಸಚಿನ್ ವೆರ್ಣೇಕರ್, ಗೆಳೆಯರ ಬಳಗದ ಸದಸ್ಯರಾದ ರಾಜಣ್ಣ, ಮಹೇಶ್, ಮಂಜುನಾಥ್, ಮಧು, ವಿನಯ್, ಶಿವಪ್ರಸಾದ್, ಅನಿಲ್ ರಾಯ್ಕರ್, ದರ್ಶನ್, ರವಿ ರಾಯ್ಕರ್, ಪ್ರವೀಣ್, ಅಕ್ಷಯ್, ಹರೀಶ್, ಅನಿಲ್ ಜಯರಾಮ್, ರಘು ತೊಗಟ, ಅರವಿಂದ, ಗುರುರಾಜ್, ನವೀನ್ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಕೃಷಿ ಪ್ರಶಸ್ತಿ ಸ್ಪರ್ಧೆಗೆ ಅರ್ಜಿ ಆಹ್ವಾನ

ದಾವಣಗೆರೆ,ಆ.15- ಕೃಷಿ ಪ್ರಶಸ್ತಿ ಬೆಳೆ ಸ್ಪರ್ಧೆಗೆ ಅರ್ಜಿಗಳನ್ನು ಆಹ್ವಾನಿಸಿದ್ದು, ಜಿಲ್ಲಾ ಮಟ್ಟಕ್ಕೆ ಮುಸುಕಿನಜೋಳ (ಮಳೆಯಾಶ್ರಿತ) ಬೆಳೆಯನ್ನು ನಿಗದಿಪಡಿಸಲಾಗಿದ್ದು, ತಾಲ್ಲೂಕು ಮಟ್ಟಕ್ಕೆ ದಾವಣಗೆರೆ, ಚನ್ನಗಿರಿ, ಹರಿಹರ ಹಾಗೂ ಹೊನ್ನಾಳಿ ತಾಲ್ಲೂಕುಗಳಿಗೆ ಭತ್ತ (ನೀರಾವರಿ) ಮತ್ತು ನ್ಯಾಮತಿ ತಾಲ್ಲೂಕಿಗೆ ಶೇಂಗಾ (ಮಳೆಯಾಶ್ರಿತ) ಹಾಗೂ ಜಗಳೂರು ತಾಲ್ಲೂಕಿಗೆ ಮುಸುಕಿನ ಜೋಳ (ಮಳೆಯಾಶ್ರಿತ) ಬೆಳೆಗಳನ್ನು ನಿಗದಿಪಡಿಸಲಾಗಿದೆ.

ಮುಂಗಾರು ಹಂಗಾಮಿಗೆ 31ನೇ ಆಗಸ್ಟ್ 2022, ಹಿಂಗಾರು ಹಂಗಾಮಿಗೆ 30ನೇ ನವೆಂಬರ್ 2022 ಆಗಿರುತ್ತವೆ. ಪ್ರಸಕ್ತ ಸಾಲಿನಲ್ಲಿ ಕೃಷಿ ಪ್ರಶಸ್ತಿಗೆ ಪ್ರತ್ಯೇಕವಾಗಿ ಮಹಿಳೆಯರಿಂದ ಅರ್ಜಿ ಆಹ್ವಾನಿಸಲಾಗಿದೆ. ವಿವರಕ್ಕೆ ಹತ್ತಿರದ ರೈತ ಸಂಪರ್ಕ ಕೇಂದ್ರ/ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಸಂಪರ್ಕಿಸಿ.

## ಬಸವೇಶ್ವರ ಬಳಗದಿಂದ 75ನೇ ವರ್ಷದ ಅಮೃತ ಮಹೋತ್ಸವ



ದಾವಣಗೆರೆ,ಆ.15- ಆಂಜನೇಯ ಬಡಾವಣೆಯ ಬಸವೇಶ್ವರ ಬಳಗದಿಂದ ಇಂದು 75ನೇ ವರ್ಷದ ಸ್ವಾತಂತ್ರ್ಯ ಅಮೃತ ಮಹೋತ್ಸವವನ್ನು ಸಡಗರ - ಸಂಭ್ರಮದಿಂದ ಆಚರಿಸಲಾಯಿತು. ಸಕಲ ಗೌರವಗಳೊಂದಿಗೆ ಅರಕೆರೆ ಪರಮೇಶ್ವರಪ್ಪ ಅವರು ಧ್ವಜಾರೋಹಣ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಡಾ. ರೇವಪ್ಪ, ಹೆಚ್. ಕೆ. ರೇವಣ್ಣ, ಶ್ರೀಮತಿ ಸುಶೀಲ ಹಿರೇಮಠ್ ಮತ್ತಿತರರು ಮಾತನಾಡಿದರು. ಗಂಗಾಧರಯ್ಯ, ಅಣ್ಣಯ್ಯ, ಬಸವರಾಜಪ್ಪ, ಹನುಮಂತ ರೆಡ್ಡಿ, ವಿರೂಪಾಕ್ಷಪ್ಪ, ಕಾಂತಯ್ಯ, ರೇವಣ ಸಿದ್ದಪ್ಪ, ಶಾಮನೂರಿನ ಕೊಂಡಜ್ಜಿ ಸುರೇಶ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಅನಿಲ್ ಗೌಡ ಸಿಹಿ -ಉಪಹಾರದ ವ್ಯವಸ್ಥೆ ಮಾಡಿದ್ದರು.

## ಅಲ್ಟಿಮೇಟ್ ಖೋ-ಖೋಗೆ ಕ್ರೀಡಾ ಹಾಸ್ಟೆಲ್ ಕ್ರೀಡಾಪಟುಗಳ ಆಯ್ಕೆ



ದಾವಣಗೆರೆ, ಆ.12- ಇಂದಿನಿಂದ ಪ್ರಾರಂಭವಾಗಲಿರುವ ದೇಶದ ಮೊಟ್ಟಮೊದಲ ಅಲ್ಟಿಮೇಟ್ ಖೋ-ಖೋ ಲೀಗ್ ಪಂದ್ಯಾವಳಿಗೆ ದಾವಣಗೆರೆ ಕ್ರೀಡಾ ವಸತಿ ನಿಲಯದ ಖೋ-ಖೋ ಕ್ರೀಡಾಪಟುಗಳಾದ ಮಹಮ್ಮದ್ ತಾಸೀನ್ ಇವರು ರಾಜಸ್ಥಾನ ವಾರಿಯರ್ಸ್ ತಂಡಕ್ಕೆ ಮತ್ತು ವೇಣುಗೋಪಾಲ್.ಎಸ್ ಅವರು ಚೆನ್ನೈ ಕ್ವಿಕ್ ಗನ್ಸ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ಕ್ರೀಡಾಪಟುಗಳು ಇಲಾಖೆಯ ತರಬೇತುದಾರ ರಾಮಲಿಂಗಪ್ಪ. ಜೆ ಅವರ ಬಳಿ ತರಬೇತಿ ಪಡೆಯುತ್ತಿದ್ದಾರೆ. ಅವರನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಹಾಗೂ ತರಬೇತುದಾರರು, ಸಿಬ್ಬಂದಿ ವರ್ಗದವರು ಶುಭ ಹಾರೈಸಿದ್ದಾರೆ.

## ವೆಜಿಟಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ ಸಂಘದ ಮಹಾಸಭೆ



ದಾವಣಗೆರೆ, ಆ. 15- ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ ಸಂಘದ 6 ನೇ ವಾರ್ಷಿಕ ಮಹಾಸಭೆ ನಗರದ ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಬ್ಯಾಂಕ್ ಸಮುದಾಯ ಭವನದಲ್ಲಿ ನಡೆಯಿತು.

ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಎನ್.ಎ. ಮುರುಗೇಶ್ ವಾರ್ಷಿಕ ಮಹಾಸಭೆಗೆ ಚಾಲನೆ ನೀಡಿ ಮಾತನಾಡಿದರು.

ಸೊಸೈಟಿ ಅಧ್ಯಕ್ಷ ಜಿ. ಸುರೇಶ್ ಹಾಲೇಕಲ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಘದ ಪ್ರಗತಿಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು. ವ್ಯವಸ್ಥಾಪಕ ಆರ್. ವೆಂಕಟಾಚಲಮೂರ್ತಿ ಸಂಘದ ಲಾಭ-ನಷ್ಟಗಳ ಲೆಕ್ಕ ಪರಿಶೋಧಕರ ವರದಿಯನ್ನು ಮಂಡಿಸಿದರು.

ಸಂಘದ ಉಪಾಧ್ಯಕ್ಷ ಜೆ.ಕೆ. ಶಿವಕುಮಾರ್, ನಿರ್ದೇಶಕರಾದ ಕೆ.ಹೆಚ್. ಶಿವಯೋಗಪ್ಪ, ಆರ್.ಎನ್. ಮಾರುತಿ, ಎಸ್. ರಾಜಣ್ಣ, ಹೆಚ್.ಬಿ. ಮಂಜುನಾಥ್, ಎಸ್.ವಿ. ರುದ್ರಮುನಿ, ಟಿ.ಮಹಾಂತೇಶ್, ಎಂ.ಹೆಚ್. ರಾಜಪ್ಪ, ಮಲ್ಲಿಕಾರ್ಜುನ್ ಪಿ. ವಾಲಿ, ಆಶಾ ಕೃಷ್ಣಮೂರ್ತಿ, ಹೆಚ್.ಟಿ. ಶ್ವೇತಾ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

## ನಿರುದ್ಯೋಗಿಗಳಿಗೆ ಉದ್ಯೋಗ ತರಬೇತಿ

ದಾವಣಗೆರೆ,ಆ.15- ಹಳೇ ತೋಳಹುಣಸೆ ರೇಷ್ಮೆ ಇಲಾಖೆ ಆವರಣದಲ್ಲಿ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ, ಖಾದಿ ಗ್ರಾಮೋದ್ಯೋಗ, ಗ್ರಾಮಾಂತರ ಕೈಗಾರಿಕಾ ವಿಭಾಗ ಮತ್ತು ಜಿಲ್ಲಾ ಪಂಚಾಯತ್ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಗ್ರಾಮೀಣ ವಿದ್ಯಾವಂತ ನಿರುದ್ಯೋಗಿಗಳಿಗೆ ಮೊಬೈಲ್ ರಿಪೇರಿ, ಎಲೆಕ್ಟ್ರಿಕ್ ಮೋಟಾರ್ ರಿವೈಂಡಿಂಗ್ ಅಂಡ್ ಸರ್ವೀಸಸ್ ಮತ್ತು ಗೃಹ ಎಲೆಕ್ಟ್ರಿಕ್ ವೈರಿಂಗ್ ತರಬೇತಿ ನೀಡಲಾಗುವುದು.

ಆಸಕ್ತಿಯುಳ್ಳ 18 ರಿಂದ 45 ವಯೋಮಿತಿಯ ಗ್ರಾಮೀಣ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ವಿವರಕ್ಕೆ ಸಂಪರ್ಕಿಸಿ : 7019980484, 9964111314, 9538395817,9481977076.

## ಮಹಾನಗರ ಪಾಲಿಕೆಯಿಂದ ಪ್ಲಾಸ್ಟಿಕ್ ಮರುಬಳಕೆ ಆಂದೋಲನ



ದಾವಣಗೆರೆ, ಆ. 15- 75ನೇ ವರ್ಷದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ದಿನವಾದ ಇಂದು ದಾವಣಗೆರೆ ಮಹಾನಗರದಲ್ಲಿ 32ನೇ ವಾರ್ಡಿನ ಭಗೀರಥ ಸರ್ಕಲ್‌ನಲ್ಲಿರುವ ಮಹಾನಗರ ಪಾಲಿಕೆಯ ಒಣ ತ್ಯಾಜ್ಯ ಸಂಗ್ರಹ ಕೇಂದ್ರದಲ್ಲಿ ಪ್ಲಾಸ್ಟಿಕ್ ಮರುಬಳಕೆಯ ಬಗ್ಗೆ ವಿಶೇಷ ಆಂದೋಲನ ಪ್ರಾರಂಭಿಸಲಾಯಿತು.

ಪ್ರತಿದಿನ ಸಾರ್ವಜನಿಕರು ಉಪಯೋಗಿಸುವ ಹಾಲಿನ ಪ್ಯಾಕೆಟ್‌ಗಳನ್ನು ಕಸದ ಜೊತೆ ಕಸದ ಗಾಡಿಗಳಿಗೆ ಹಾಕದೆ ಪ್ರತ್ಯೇಕಿಸಿ ಗಾಡಿಗಳಿಗೆ ನೀಡಲು ಪ್ರಚಾರ ಮಾಡಲು ಪ್ರಾರಂಭಿಸಲಾಯಿತು.

ಮಹಾನಗರ ಪಾಲಿಕೆ, ಕರ್ನಾಟಕ ಹಾಲು ಒಕ್ಕೂಟ ಹಾಗೂ ಹಸಿರು ದಳ ಸಂಸ್ಥೆಯ ಸಹಯೋಗದಲ್ಲಿ 'ಹಾಲು ಬಳಕೆಗೆ, ಹಾಲಿನ ಕವರ್ ಮರು ಬಳಕೆಗೆ' ಎಂಬ ಕಾನ್ಸೆಪ್ಟ್ ಅನ್ನು ಪ್ರಚಾರಪಡಿಸಲು ತೀರ್ಮಾನಿಸಲಾಗಿದೆ.

ಈ ಕಾರ್ಯಕ್ರಮಕ್ಕೆ ಮಹಾಪೌರರಾದ ಶ್ರೀಮತಿ ಜಯಮ್ಮ, ಮಾಜಿ ಮಹಾಪೌರರಾದ 32ನೇ ವಾರ್ಡಿನ ಮಹಾನಗರ ಪಾಲಿಕೆ ಸದಸ್ಯೆ ಶ್ರೀಮತಿ ಉಮಾ ಪ್ರಕಾಶ್ ರವರು ಭಗೀರಥ ವೃತ್ತದಲ್ಲಿ ಚಾಲನೆ ನೀಡಿ ಮಾತನಾಡುತ್ತಾ, ಕಸವನ್ನು ಪ್ರತ್ಯೇಕಿಸಿ ಕೊಡುವುದರಿಂದ ಗಾಂಧೀಜಿಯವರ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಸ್ವಚ್ಛ ಭಾರತದ ಕನಸಿಗೆ ಸಾರ್ವಜನಿಕರು ಕೊಡುಗೆ ನೀಡಿದಂತಾಗುತ್ತದೆ. ಸ್ವಾತಂತ್ರದ ಅಮೃತ ಮಹೋತ್ಸವದ ದಿನವಾದ ಇಂದು ಸಾರ್ವಜನಿಕರು ಸ್ವಚ್ಛ ಭಾರತಕ್ಕೆ ತಮ್ಮ ಕೊಡುಗೆ ನೀಡಲು ಸಂಕಲ್ಪ ಮಾಡಲು ಸಾರ್ವಜನಿಕರಿಗೆ ಕರೆ ನೀಡಿದರು.

## ಪ್ರಥಮ ಪ್ರಧಾನಿ ನೆಹರು ನೆನೆದ ಮೋದಿ

**(3ನೇ ಪುಟದಿಂದ)** ಭಾರತಿ ಅಂಥವರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ ಮತ್ತು ಸ್ವಾತಂತ್ರ್ಯದ ನಂತರ ದೇಶವನ್ನು ಕಟ್ಟಿದ್ದಾರೆ. ಇಂದು ಅವರಿಗೆ ನಮಿಸುವ ಅವಕಾಶ ದೊರೆತಿದೆ ಎಂದು ಮೋದಿ ತಿಳಿಸಿದ್ದಾರೆ.

# ಸ್ವಾತಂತ್ರ್ಯ ಎಂದರೆ ಕೇವಲ ಸ್ವಚ್ಛಂದತೆ ಅಲ್ಲ

## ದಾವಣಗೆರೆ ಕ್ಲಬ್ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಹೆಚ್.ಬಿ. ಮಂಜುನಾಥ್ ವಿಶ್ಲೇಷಣೆ



ದಾವಣಗೆರೆ, ಆ. 15- ದಾವಣಗೆರೆ ಕ್ಲಬ್ ವತಿಯಿಂದ ಕ್ಲಬ್ ಆವರಣದಲ್ಲಿ ಸೋಮವಾರ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ನಿವೃತ್ತ ಸೈನಿಕರು ಹಾಗೂ ಕ್ಲಬ್‌ನ ಹಿರಿಯ ಸದಸ್ಯರುಗಳಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ, ಹಿರಿಯ ವ್ಯಂಗ್ಯಚಿತ್ರ ಕಲಾವಿದರೂ ಆದ ಹೆಚ್.ಬಿ. ಮಂಜುನಾಥ್ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಾ, ಸ್ವಾತಂತ್ರ್ಯ ಎಂದರೆ ಕೇವಲ ಸ್ವಚ್ಛಂದತೆ ಅಲ್ಲ. ಮತ್ತೊಬ್ಬರ ನಿಯಂತ್ರಣದಲ್ಲಿ ನಾವಿರದೆ, ನಮ್ಮ ನಿಯಂತ್ರಣದಲ್ಲಿ ನಾವಿದ್ದು ಸಾಧನೆ ಮಾಡುವುದೇ ಸ್ವಾತಂತ್ರ್ಯ ಎಂದು ಹೇಳಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದ ಸಮಯದಲ್ಲಿ 20 ಕೋಟಿ ಜನಸಂಖ್ಯೆ ಇತ್ತು. ಅಂದು ದೇಶದ ಜನತೆಗೆ ಆಹಾರ ಒದಗಿಸಲೂ ಸಹ ಸಾಧ್ಯವಾಗುತ್ತಿರಲಿಲ್ಲ. ಆದರೆ ಈಗ 148 ಕೋಟಿ ಜನರಿದ್ದರೂ, ದೇಶವಾಸಿಗಳಿಗೆ ಆಹಾರ ನೀಡಿ ಬೇರೆ ದೇಶಕ್ಕೂ ರಫ್ತು ಮಾಡುತ್ತಿದ್ದೇವೆ. ಇದು ನಮ್ಮ ಸಾಧನೆ ಎಂದು ಬಣ್ಣಿಸಿದರು.

ದೇಶಕ್ಕೆ ಉತ್ತಮ ನಾಯಕರು ದೊರೆತಿದ್ದಾರೆ. ಆ ನಾಯಕತ್ವ ಮುಂದುವರೆಸಿಕೊಂಡು ಹೋಗಬೇಕಿದೆ. ಕೇವಲ ಒಬ್ಬ ನಾಯಕ ಉತ್ತಮರಿದ್ದರೆ ಸಾಲದು, ಉಳಿದ ಎಲ್ಲಾ ನಾಯಕರೂ ಉತ್ತಮರಾಗಿದ್ದರೆ ದೇಶ ಸದೃಢವಾಗಲು ಸಾಧ್ಯ ಎಂದು ಹೇಳಿದರು.

ಸ್ವಾತಂತ್ರ್ಯ ಹೋರಾಟದ ವೇಳೆ ಮಹಾತ್ಮ ಗಾಂಧೀಜಿ ದಾವಣಗೆರೆಗೆ ಬಂದು ಹೋಗಿದ್ದ ಪ್ರತೀಕವಾಗಿ ಶಿಕ್ಷಣ ಸಂಸ್ಥೆ ಆರಂಭವಾಗಿ ಇಂದು ವಿದ್ಯಾನಗರಿ ಎಂದು ಕರೆಯಿಸಿಕೊಳ್ಳಲು ಸಹಕಾರಿಯಾಗಿದೆ. ಜೊತೆಗೆ ವಿದೇಶಿ ಬಟ್ಟೆಗಳನ್ನು ಸುಟ್ಟು ಕಾಮದಹನ ಮಾಡಿದ್ದ ಘಟನೆಯಿಂದ ಕಾಟನ್ ಮಿಲ್ ಸ್ಥಾಪನೆಯಾಗಿ ದಾವಣಗೆರೆ ಮ್ಯಾಂಚೆಸ್ಟರ್ ಎನಿಸಿಕೊಳ್ಳಲೂ ಕಾರಣವಾಗಿತ್ತು ಎಂದು ವಿವರಿಸಿದರು.

ದಾವಣಗೆರೆ ಕ್ಲಬ್ ಮಾಜಿ ಗೌರವ ಕಾರ್ಯದರ್ಶಿ ಬಾದಾಮಿ ಕರಿಬಸಪ್ಪ ಮುಖ್ಯ ಅತಿಥಿಯಾಗಿ ಮಾತನಾಡುತ್ತಾ, ಬ್ರಿಟಿಷರಿಂದ ಆಡಳಿತಾತ್ಮಕ ಸ್ವಾತಂತ್ರ್ಯ ಗಳಿಸಿದ್ದೇವೆಯೇ ಹೊರತು, ನಮ್ಮತನವನ್ನು ನಾವು ಕಳೆದುಕೊಂಡಿದ್ದೇವೆ ಎಂದು ಹೇಳಿದರು.

ದೇಶವನ್ನು ವಶಪಡಿಸಿಕೊಂಡರೂ ಸಮಾಧಾನಗೊಳ್ಳದ ಬ್ರಿಟಿಷರು, ದೇಶದ ಸಂಸ್ಕೃತಿ, ಸಂಸ್ಕಾರ, ಗುರುಕುಲ, ಆಯುರ್ವೇದ ಪದ್ಧತಿಯನ್ನು ನಾಶಗೊಳಿಸಲು ಯತ್ನಿಸಿದರು. ಆ ಮೂಲಕ ನಾವು ನಮ್ಮತನವನ್ನು ಕಳೆದುಕೊಳ್ಳುತ್ತಾ ಬಂದೆವು. ವೈಚಾರಿಕತೆ, ವೈಜ್ಞಾನಿಕತೆಯನ್ನು ಜೀವನದಲ್ಲಿ ಅಳವಡಿಸಿಕೊಂಡು ನಮ್ಮತನವನ್ನು ಮರೆಯದೇ ಮೆರೆಯೋಣ ಎಂದು ಕರೆ ನೀಡಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಟಿ.ಎಂ. ಶಿವಯೋಗಪ್ಪ, ನಿವೃತ್ತ ಸೈನಿಕರುಗಳಾದ ಬಸವರಾಜ ದಂಡೂರ, ಮಂಜಾನಾಯ್ಕ ಕೆ.ಆರ್., ಆನಗೋಡು ನಂಜುಂಡಪ್ಪ, ಎಸ್.ಟಿ. ಕುಸುಮ ಶೆಟ್ಟಿ, ಆರ್. ಎಲ್. ರಮಾನಂದ್, ಎಸ್.ಎಂ. ಬ್ಯಾಡಗಿ, ಬಿ. ಹೆಚ್. ಪರಶುರಾಮಪ್ಪ ಸೇರಿದಂತೆ 75 ವರ್ಷ ಮೀರಿದ ಕ್ಲಬ್‌ನ ಹಿರಿಯ ಸದಸ್ಯರುಗಳನ್ನು ಸನ್ಮಾನಿಸಲಾಯಿತು.

ಉಪಾಧ್ಯಕ್ಷ ಎ.ಬಿ. ಚಂದ್ರಶೇಖರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಅಧ್ಯಕ್ಷ ಮತ್ತಿಹಳ್ಳಿ ವೀರಣ್ಣ, ಗೌರವ ಕಾರ್ಯದರ್ಶಿ ರವಿಶಂಕರ್ ಪಲ್ಲಾಗಟ್ಟೆ, ಸಹ ಕಾರ್ಯದರ್ಶಿ ಎಸ್.ಜಿ. ಉಳವಯ್ಯ, ಖಜಾಂಚಿ ಲಿಂಗರಾಜ್ ವಾಲಿ ಹೆಚ್.ಸಿ., ನಿರ್ದೇಶಕರುಗಳಾದ ಬೆಳ್ಳೂಡಿ ಸದಾನಂದ, ರುದ್ರೇಶ್ ಹೆಚ್.ಬಿ., ಅಭಿಷೇಕ್ ಬೇತೂರು, ಬಾದಾಮಿ ಮಲ್ಲಿಕಾರ್ಜುನ್, ತಿಮ್ಮರಾಜ ಗುಪ್ತ ಎಸ್.ಕೆ., ಪ್ರಶಾಂತ್ ಗುಪ್ತ ಎಸ್.ಕೆ. ಹಾಗೂ ಕ್ಲಬ್ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ರವಿಶಂಕರ್ ಪಲ್ಲಾಗಟ್ಟೆ ಸ್ವಾಗತಿಸಿದರು. ಉಳವಯ್ಯ ಎಸ್.ಜಿ. ಕಾರ್ಯಕ್ರಮ ನಿರೂಪಿಸಿದರು. ಲಿಂಗರಾಜ್ ವಾಲಿ ವಂದಿಸಿದರು.

## ನ್ಯಾಯ ದಾನ ಕೇವಲ ನ್ಯಾಯಾಲಯಗಳ ಹೊಣೆಯಲ್ಲ : ಸಿಜೆಐ

ನವದೆಹಲಿ, ಆ. 15 – ನ್ಯಾಯದಾನ ಮಾಡುವುದು ಕೇವಲ ನ್ಯಾಯಾಲಯಗಳ ಹೊಣೆ ಅಲ್ಲ ಎಂದಿರುವ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್.ವಿ. ರಮಣ, ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳು ಸಂವಿಧಾನದಲ್ಲಿ ಸಮಾನ ವಿಶ್ವಸ್ಥವಾಗಿವೆ ಎಂದಿದ್ದಾರೆ.

ಸುಪ್ರೀಂ ಕೋರ್ಟ್ ಆವರಣದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಮಾತನಾಡುತ್ತಿದ್ದ ಅವರು, ಸಂವಿಧಾನದ 38ನೇ ವಿಧಿಯಲ್ಲಿ ಬರುವ ರಾಜ್ಯ ನಿರ್ದೇಶಕ ತತ್ವಗಳ ಅನ್ವಯ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ ಒದಗಿಸುವುದು ದೇಶದ ಹೊಣೆ ಎಂದಿದ್ದಾರೆ.

ಸಂವಿಧಾನದ ಈ ವಿಧಿಯು ನ್ಯಾಯ ಒದಗಿಸುವುದು ಕೇವಲ ನ್ಯಾಯಾಲಯದ ಹೊಣೆ ಎಂಬ ಭಾವನೆ ತೊಡೆದು ಹಾಕುತ್ತದೆ ಎಂದಿದ್ದಾರೆ.

## ಉಕ್ಕಡಗಾತ್ರಿಯಲ್ಲಿ ಬೆಳ್ಳಿ ರಥೋತ್ಸವ



ಮಲೇಬೆನ್ನೂರು, ಆ.15- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಪುಣ್ಯಾರಾಧನೆ ಅಂಗವಾಗಿ ಸೋಮವಾರ ಅಜ್ಜಯ್ಯನ ಬೆಳ್ಳಿ ರಥೋತ್ಸವ ಸಂಭ್ರಮದಿಂದ ಜರುಗಿತು.

ಬೆಳಿಗ್ಗೆ ದೇವಸ್ಥಾನದಲ್ಲಿ ಲೋಕ ಕಲ್ಯಾಣಾರ್ಥವಾಗಿ ಗಣ ಹೋಮ ಮತ್ತು ರುದ್ರ ಹೋಮ ನೆರವೇರಿತು.

ನಂತರ ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರು ಬೆಳ್ಳಿ ರಥಕ್ಕೆ ಪೂಜೆ ಸಲ್ಲಿಸಿ, ವಿವಿಧ ಕಲಾ-ಮೇಳಗಳು ಗಮನ ಸೆಳೆದವು. ಶ್ರಾವಣ ಮಾಸದ 3ನೇ ಸೋಮವಾರದ ಪ್ರಯುಕ್ತ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ದೇವಸ್ಥಾನದ ಕಾರ್ಯದರ್ಶಿ ಸುರೇಶ್ ಸೇರಿದಂತೆ ಎಲ್ಲಾ ಸದಸ್ಯರು ಹಾಜರಿದ್ದರು.

ರಾತ್ರಿ ಅಜ್ಜಯ್ಯ ಪಾಲಿಕೋತ್ಸವ ವಿಜೃಂಭಣೆಯಿಂದ ನೆರವೇರಿತು.








ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಶಾಲೆಯ ಮಕ್ಕಳು ನೃತ್ಯ ರೂಪಕ ಪ್ರದರ್ಶಿಸಿದರು. ಪೊಲೀಸ್ ಶ್ವಾನ ದಳದಿಂದ ಪ್ರದರ್ಶನ ನೆರವೇರಿತು. ಇದೇ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು, ಪೊಲೀಸ್ ಅಧಿಕಾರಿಗಳನ್ನು ಸನ್ಮಾನಿಸಲಾಯಿತು.

# ದಾಸ್ಯ ಸಂಕೋಲೆಯಿಂದ ಮುಕ್ತಗೊಳಿಸಿದವರ ಸ್ಮರಿಸಿ

## ಹರಿಹರದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಶಾಸಕ ರಾಮಪ್ಪ ಕರೆ

ಹರಿಹರ, ಆ.15- ಬ್ರಿಟಿಷರ ದಬ್ಬಾಳಿಕೆ ಮತ್ತು ದಾಸ್ಯದ ಸಂಕೋಲೆಯಿಂದ ವಿಮುಕ್ತಿ ಹೊಂದಲು ತ್ಯಾಗ, ಬಲಿದಾನ ಮಾಡಿದ ಮಹಾನ್ ವ್ಯಕ್ತಿಗಳನ್ನು ಸ್ಮರಣೆ ಮಾಡುವುದರ ಜೊತೆಗೆ ಅವರ ಹೋರಾಟದ ವಿಚಾರಗಳನ್ನು ಯುವಕರಿಗೆ ಮನದಟ್ಟು ಮಾಡಬೇಕಾಗಿದೆ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.

ನಗರದ ಗಾಂಧಿ ಮೈದಾನದಲ್ಲಿ ನಡೆದ 75 ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದೇಶ ಸ್ವಾತಂತ್ರ್ಯ ಪಡೆಯುವಲ್ಲಿ ಮಹಾತ್ಮ ಗಾಂಧಿ, ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಜವಾಹರಲಾಲ್ ನೆಹರು ಸೇರಿದಂತೆ ಅನೇಕ ಮಹಾನ್ ವ್ಯಕ್ತಿಗಳು ಸಾಕಷ್ಟು ಶ್ರಮಿಸಿದ್ದಾರೆ. ಅವರ ತ್ಯಾಗ, ಬಲಿದಾನಗಳನ್ನು ಯುವಕರು ತಿಳಿದು ಅವರ ಮಾರ್ಗದಲ್ಲಿ ನಡೆಯಬೇಕು ಎಂದು ರಾಮಪ್ಪ ಕರೆ ನೀಡಿದರು.

ತಹಶೀಲ್ದಾರ್ ಎಂ. ಬಿ. ಅಶ್ವತ್ಥ್ ಅವರು ಧ್ವಜಾ ರೋಹಣ ನೆರವೇರಿಸಿ, ಇಂದು ಆಚರಣೆ ಮಾಡುತ್ತಿರುವ 75 ನೇ ಅಮೃತ ಮಹೋತ್ಸವ ಐತಿಹಾಸಿಕ ಕ್ಷಣವಾಗಿದೆ. ಸ್ವಾತಂತ್ರ್ಯ ಹೋರಾಟಗಾರರು, ಹುತಾತ್ಮರು, ವೀರ ಸೇನಾನಿಗಳನ್ನು ಧನ್ಯತಾ ಭಾವದಿಂದ ಸ್ಮರಿಸಬೇಕಾಗಿದೆ. ಈ ಮಹಾನ್ ವ್ಯಕ್ತಿಗಳ ಹೋರಾಟ ಸದಾಕಾಲವೂ ಸ್ಪೂರ್ತಿದಾಯಕ ಎಂದರು.



ಒಂದು ಕಾಲದಲ್ಲಿ ದೇಶದಲ್ಲಿ ಆಹಾರದ ಕೊರತೆ ಇತ್ತು. ಆದರೆ, ಇಂದು ವಿಶ್ವಕ್ಕೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವಷ್ಟು ಪ್ರಗತಿ ಸಾಧಿಸಲಾಗಿದೆ. ಶಿಕ್ಷಣ, ಬಾಹ್ಯಾಕಾಶ, ವಿಜ್ಞಾನ, ತಂತ್ರಜ್ಞಾನ, ಹಾಲು ಉತ್ಪಾದನೆ, ಸೇರಿದಂತೆ ಎಲ್ಲಾ ರಂಗಗಳಲ್ಲಿ ದೇಶ ಬೆಳವಣಿಗೆ ಕಾಣುತ್ತಿದೆ. ಹಿರಿಯರು ಕಂಡಿದ್ದ ರಾಮ ರಾಜ್ಯದ ಕನಸು ನನಸು ಆಗುತ್ತ ಸಾಗಿದೆ ಎಂದು ಹೇಳಿದರು.

ನಗರಸಭೆ ಅಧ್ಯಕ್ಷೆ ಶಾಹೀನಾಬಾನು ದಾದಾಪೀರ್ ಭಾನುವಳ್ಳಿ ಮಾತನಾಡಿದರು. ಈ ವೇಳೆ ಸಮಾಜದ ವಿವಿಧ ರಂಗಗಳು ಹಾಗೂ ಸರ್ಕಾರದ ಇಲಾಖೆಗಳಲ್ಲಿ ಸಾಧನೆ ಮಾಡಿದ 75 ಸಾಧಕರಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ, ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರನ್, ಸಿಪಿಐ ಸತೀಶ್ ಕುಮಾರ್, ಪೌರಾಯುಕ್ತ ಐಗೂರು ಬಸವರಾಜ್, ಸಿಡಿಪಿಓ ನಿರ್ಮಲ, ತೋಟಗಾರಿಕೆ ಇಲಾಖೆ ರೇಖಾ, ಕೃಷಿ ಇಲಾಖೆ ನಾರನಗೌಡ, ಲೋಕೋಪಯೋಗಿ ಇಲಾಖೆ ಶಿವಮೂರ್ತಿ, ಆರೋಗ್ಯ ಇಲಾಖೆ ಡಾ ಚಂದ್ರಮೋಹನ್, ಅಬಕಾರಿ ಶೀಲಾ, ಗ್ರಾಮೀಣ ನೀರು ಸರಬರಾಜು ಇಲಾಖೆ ಬಸವರಾಜ್, ಪಿಎಸ್ಐ ಶಂಕರ್ ಗೌಡ ಪಾಟೀಲ್, ಡಿ. ರವಿಕುಮಾರ್, ಅರವಿಂದ್, ನಗರಸಭೆ ಸದಸ್ಯರಾದ ಶಂಕರ್ ಖಟಾವ್ಕರ್, ದಾದಾಖಲಂದರ್, ಅಬ್ದುಲ್ ಅಲಿಂ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಕೆ. ಭೂಮೇಶ್ ಮತ್ತಿತರರು ಉಪಸ್ಥಿತರಿದ್ದರು.

# 'ಭರವಸೆಗಳ ಮಾತಿಲ್ಲ, ಕೆಲಸದ ಲೆಕ್ಕವಿಲ್ಲ'

**ಪ್ರಧಾನಿ ಮೋದಿ ಕೆಂಪು ಕೋಟೆ ಭಾಷಣಕ್ಕೆ ಕಾಂಗ್ರೆಸ್ ತರಾಟೆ**

ನವದೆಹಲಿ, ಆ. 15 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಎಂಟು ವರ್ಷಗಳ ಹಿಂದೆ ನೀಡಿದ ಭರವಸೆಗಳ ಬಗ್ಗೆ ಅಮೃತ ಸ್ವಾತಂತ್ರ್ಯ ಮಹೋತ್ಸವದ ಸಂದರ್ಭದಲ್ಲಿ ಮಾತನಾಡಿಲ್ಲ, ತಮ್ಮ ಆಡಳಿತಾವಧಿಯ ಲೆಕ್ಕ ನೀಡಿಲ್ಲ ಎಂದು ಕಾಂಗ್ರೆಸ್ ತರಾಟೆಗೆ ತೆಗೆದುಕೊಂಡಿದೆ.

ವಂಶವಾದದ ಬಗ್ಗೆ ಪ್ರಧಾನ ಮಂತ್ರಿ ಮಾತನಾಡಿರುವುದನ್ನೂ ಲೇವಡಿ ಮಾಡಿರುವ ಪ್ರತಿಪಕ್ಷ ಕಾಂಗ್ರೆಸ್, ಕೇಂದ್ರದ ಹಲವು ಸಚಿವರ ಮಕ್ಕಳು ಯಾವುದೇ ಅನುಭವ ಇಲ್ಲದಿದ್ದರೂ ಕ್ರಿಕೆಟ್ ಹಾಗೂ ರಾಜಕೀಯದಲ್ಲಿ ಉನ್ನತ ಸ್ಥಾನ ಅಲಂಕರಿಸಿರುವ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ ಎಂದು ಹೇಳಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ತಮ್ಮದೇ ಮಾತುಗಳಿಗೆ ಬಲಿಪಶುವಾಗಿದ್ದಾರೆ. ಕಳೆದ ಎಂಟು ವರ್ಷಗಳಲ್ಲಿ ಅವರು ನೀಡಿರುವ ಬಹುತೇಕ ಭರವಸೆಗಳು ಈಡೇರಿಲ್ಲ. ಹೀಗಾಗಿ ಈ ಬಾರಿಯ ಅವರ ಭಾಷಣದಲ್ಲಿ ಉತ್ಸಾಹವಾಗಲೀ ಹೃದಯವಾಗಲೀ ಇಲ್ಲ ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರ ಹೇಳಿದ್ದಾರೆ.

ರೈತರ ಆದಾಯ ದುಪ್ಪಟ್ಟು ಮಾಡುವ, ಎಲ್ಲರಿಗೂ ವಸತಿ ಕಲ್ಪಿಸುವ, ಕಪ್ಪು ಹಣ ವಾಪಸ್ ತರುವ, ಉದ್ಯೋಗ ಒದಗಿಸುವ ಹಾಗೂ ಪ್ರತಿಯೊಂದು ಬ್ಯಾಂಕ್ ಖಾತೆಗೆ 15 ಲಕ್ಷ ರೂ. ಜಮಾ ಮಾಡುವ ಭರವಸೆಗಳು ಏನಾಗಿವೆ? ಈ ಎಲ್ಲ ಭರವಸೆಗಳು ಅವರು ಮಾತನಾಡಲು ಇಲ್ಲವೇ ನಿದ್ರಿಸಲು ಬಿಡುತ್ತಿಲ್ಲ. ಹೀಗಾಗಿ ಅವರು ಬಳಲಿದಂತೆ ಕಾಣುತ್ತಿದ್ದಾರೆ ಎಂದು ಖೇರ ಹೇಳಿದ್ದಾರೆ.

ಮೋದಿ ತಮ್ಮ ಎಂಟು ವರ್ಷಗಳ ಆಡಳಿತಾವಧಿಯ ಪ್ರಗತಿ ವರದಿ ಹಾಗೂ ಲೆಕ್ಕ ನೀಡುತ್ತಾರೆ ಎಂಬ ನಿರೀಕ್ಷೆ ಜನರಲ್ಲಿತ್ತು. ಆದರೆ, ಈ ಕೆಲಸ ಮಾಡದೇ ಪ್ರಧಾನ ಮಂತ್ರಿ ತಮ್ಮ ಬೆಂಬಲಿಗರು ಹಾಗೂ ಇಡೀ ದೇಶವನ್ನು ನಿರಾಸೆಗೆ ಗುರಿ ಮಾಡಿದ್ದಾರೆ ಎಂದು ಖೇರ ತಿಳಿಸಿದ್ದಾರೆ.

ವಂಶವಾದದ ಬಗ್ಗೆ ಪ್ರಧಾನಿ ಮೋದಿ ಮಾತನಾಡಿದ್ದಾರೆ. ಆದರೆ, ಕ್ರಿಕೆಟ್ ಜಗತ್ತಿನಲ್ಲಿ ಉನ್ನತ ಸ್ಥಾನ ಹೊಂದಿದವರು ಲಾರ್ಡ್ಸ್ ಕ್ರಿಕೆಟ್ ಮೈದಾನದಲ್ಲಿ ಶತಕ ಭಾರಿಸಿದವರೇನೂ ಅಲ್ಲ ಎಂದು ಖೇರ ಹೇಳಿದ್ದಾರೆ. ಪರೋಕ್ಷವಾಗಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಪುತ್ರ ಜಯ್ ಷಾ ಬಿಸಿಸಿಐ ಕಾರ್ಯದರ್ಶಿ ಯಾಗಿರುವುದನ್ನು ಪ್ರಸ್ತಾಪಿಸಿದ್ದರು.

ಇನ್ನೋರ್ವ ಸಚಿವರ ಪುತ್ರ ಭಾರತೀಯ ವಿದೇಶಾಂಗ ಸೇವೆ ಪರೀಕ್ಷೆಯಲ್ಲೇನೂ ಉತ್ತೀರ್ಣರಾಗಿಲ್ಲ. ಆದರೆ, ದೊಡ್ಡ ಚಿಂತಕರ ಚಾವಡಿಯಲ್ಲಿ ಉನ್ನತ ಸ್ಥಾನ ಹೊಂದಿದ್ದಾರೆ. ಮೋದಿ ಹೇಳಿಕೆ ಅವರದೇ ಸಚಿವರು ಹಾಗೂ ಅವರ ಪುತ್ರರ ವಿರುದ್ಧ ಮಾಡಿರುವ ಟೀಕೆ. ಈ ಬಗ್ಗೆ ಮೋದಿಯವರೇ ಉತ್ತರಿಸಬೇಕು ಎಂದು ಕಾಂಗ್ರೆಸ್ ನಾಯಕ ಹೇಳಿದ್ದಾರೆ.

## ರೇಬೀಸ್ ವಿರೋಧಿ ಮಾಸಾಚರಣೆ

ಇಂದಿನಿಂದ ಬರುವ ಸೆಪ್ಟೆಂಬರ್ 12 ರವರೆಗೆ ಪಾಲಿ ಕ್ಲಿನಿಕ್ (ಪಶು ಆಸ್ಪತ್ರೆ) ಆವರಣದಲ್ಲಿ ರೇಬೀಸ್ ವಿರೋಧಿ ಮಾಸಾಚರಣೆ ನಡೆಯಲಿದೆ. ನಾಯಿ- ಬೆಕ್ಕುಗಳಿಗೆ ಉಚಿತ ರೇಬೀಸ್ ಲಸಿಕಾ ಕಾರ್ಯಕ್ರಮವು ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ ನಡೆಯಲಿದೆ.

# ಸ್ವಾತಂತ್ರ್ಯಕ್ಕಾಗಿ ಮಡಿದರನ್ನು ಸ್ಮರಿಸುವುದು ನಮ್ಮ ಕರ್ತವ್ಯ

## ಜಗಳೂರಿನ ಸ್ವಾತಂತ್ರ್ಯ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಎಸ್.ವಿ.ರಾಮಚಂದ್ರ

ಜಗಳೂರು,ಆ.15- ಸ್ವತಂತ್ರ ಭಾರತಕ್ಕಾಗಿ ತ್ಯಾಗ, ಬಲಿದಾನ ಮಾಡಿದ ಮಹನೀಯರನ್ನು ನಾವೆಲ್ಲರೂ ಇಂದು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ ಎಂದು ಶಾಸಕ ಎಸ್.ವಿ. ರಾಮಚಂದ್ರ ತಿಳಿಸಿದರು.

ಪಟ್ಟಣದ ನೂತನ ಬಯಲು ಮಂದಿರದ ಆವರಣದಲ್ಲಿ ಇಂದು ಆಯೋಜಿಸಲಾಗಿದ್ದ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

1857 ರಿಂದ ಆರಂಭವಾದ ಮೊದಲ ಸ್ವಾತಂತ್ರ್ಯ ಹೋರಾಟ ಮತ್ತು ಸ್ವತಂತ್ರ ಭಾರತಕ್ಕಾಗಿ ನಡೆದ ನಿರಂತರ ಹೋರಾಟದಲ್ಲಿ ಅನೇಕ ಮಹನೀಯರು ತಮ್ಮ ಪ್ರಾಣವನ್ನೇ ತೆತ್ತಿದ್ದಾರೆ. ಇಂಥ ಮಹನೀಯರನ್ನು ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಸಂದರ್ಭದಲ್ಲಿ ಸ್ಮರಿಸಬೇಕಾಗಿದೆ ಎಂದರು.

ದೇಶಾದ್ಯಂತ ನಡೆದ ಹರ್ ಘರ್ ತಿರಂಗ ಅಭಿಯಾನ ಮತ್ತು ನಿನ್ನೆ ಪಟ್ಟಣದಲ್ಲಿ ಆಯೋಜಿಸಲಾಗಿದ್ದ ಪಂಜಿನ ಮೆರವಣಿಗೆಯಲ್ಲಿ ಸಹಸ್ರಾರು ವಿದ್ಯಾರ್ಥಿಗಳು ಭಾಗವಹಿಸುವ ಮೂಲಕ ಯಶಸ್ವಿಯಾಗಿದೆ. 75ನೇ ವರ್ಷದ ಸ್ವಾತಂತ್ರ್ಯೋತ್ಸವದ ಸವಿನೆನಪಿಗಾಗಿ ನಿರ್ಮಿಸಲಾಗಿರುವ 100 ಅಡಿ ಎತ್ತರದ ಬೃಹತ್ ಧ್ವಜ ಕಂಬ ಮತ್ತು ಧ್ವಜಾರೋಹಣ ನೆರವೇರಿಸುವುದು ಅತ್ಯಂತ ಅರ್ಥಗರ್ಭಿತವಾಗಿದೆ ಎಂದರು.



ಜಗಳೂರು ವಿಧಾನಸಭಾ ಕ್ಷೇತ್ರ ಬರಪೀಡಿತವಾಗಿದ್ದರೂ, ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದೆ. ನಮ್ಮ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ ಎಂದರು.

ಯಾರು ಏನೇ ಹೇಳಿದರೂ ತರಳಬಾಳು ಜಗದ್ಗುರುಗಳ ಆಶೀರ್ವಾದದಿಂದ 57 ಕೆರೆಗಳ ತುಂಬಿಸುವ ಯೋಜನೆ ಅತ್ಯಂತ ಯಶಸ್ವಿಯಾಗಿ ಕಾರ್ಯರೂಪಕ್ಕೆ ಬಂದಿದೆ. ತುಪ್ಪದಹಳ್ಳಿ ಕೆರೆಗೆ ನೀರು ಹರಿದಿದೆ. ತಾಲ್ಲೂಕಿನ ಇತರೆ ಎಲ್ಲಾ ಕೆರೆಗಳಿಗೂ ಬರುವ ಡಿಸೆಂಬರ್ ಒಳಗಾಗಿ ನೀರು ಹರಿದು ಬರಲಿದೆ. ಈ ಬಗ್ಗೆ ಯಾವುದೇ ಅನುಮಾನ ಬೇಡ ಎಂದು ಶಾಸಕರು ತಿಳಿಸಿದರು.

**ಭದ್ರಾ ಮೇಲ್ದಂಡೆ ಯೋಜನೆ:** 1338 ಕೋಟಿ ರೂ. ವೆಚ್ಚದ ಭದ್ರಾ ಮೇಲ್ದಂಡೆ ಯೋಜನೆಗೆ ಇದೇ ಆವರಣದಲ್ಲಿ ಮುಖ್ಯಮಂತ್ರಿಗಳು ಚಾಲನೆ ನೀಡಿದ್ದಾರೆ. ಈ ಯೋಜನೆ ನನ್ನ ಹಾಗೂ ನಮ್ಮ ಸರ್ಕಾರದ ಸಾಧನೆಯಾಗಿದೆ. ಈಗಾಗಲೇ ಟೆಂಡರ್ ಮುಗಿದಿದ್ದು, ಕಾಮಗಾರಿ ಆರಂಭವಾಗಿದೆ. ಈ ಎರಡು ಯೋಜನೆಗಳ ಜಾರಿಯಿಂದಾಗಿ ಜಗಳೂರು ಕ್ಷೇತ್ರ ಹಸಿರು ನಾಡಾಗಲಿದೆ. ಕ್ಷೇತ್ರದ ಸಮಗ್ರಾಭಿವೃದ್ಧಿಯೇ ನನ್ನ ಆದ್ಯತೆ ಎಂದು ತಿಳಿಸಿದರು.

ಧ್ವಜಾರೋಹಣ ನೆರವೇರಿಸಿ ಮಾತನಾಡಿದ ತಹಶೀಲ್ದಾರ್ ಜಿ. ಸಂತೋಷ್ ಕುಮಾರ್ ಅವರು, ತ್ಯಾಗ, ಬಲಿದಾನಗಳಿಂದ ಪಡೆದುಕೊಂಡಿರುವ ಸ್ವಾತಂತ್ರ್ಯ ಮತ್ತು ಸಂವಿಧಾನವನ್ನು ನಾವೆಲ್ಲರೂ ಗೌರವಿಸಬೇಕು ಎಂದು ಹೇಳಿದರು.

ಸಮಾರಂಭದಲ್ಲಿ ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿ ಚಂದ್ರಶೇಖರ್, ಮುಖ್ಯಾಧಿಕಾರಿ ಲೋಕನಾಯಕ್. ಸಿಪಿಐ ಸತ್ಯನಾರಾಯಣಸ್ವಾಮಿ, ಪಟ್ಟಣ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ವಿಶಾಲಾಕ್ಷಿ, ಉಪಾಧ್ಯಕ್ಷೆ ನಿರ್ಮಲ ಕುಮಾರಿ, ತಾಲ್ಲೂಕು ನೌಕರರ ಸಂಘದ ಅಧ್ಯಕ್ಷ ಚಂದ್ರಪ್ಪ, ಕಸಾಪ ಅಧ್ಯಕ್ಷೆ ಸುಜಾತಮ್ಮ, ವಕೀಲರ ಸಂಘದ ಅಧ್ಯಕ್ಷ ಓಂಕಾರಪ್ಪ, ಬಿಜೆಪಿ ಮಂಡಲ ಅಧ್ಯಕ್ಷ ಹೆಚ್.ಸಿ. ಮಹೇಶ್, ಶಾಸಕರ ಪುತ್ರ ಅಜಯೇಂದ್ರಸಿಂಹ, ವಾಣಿಜ್ಯೋದ್ಯಮಿಗಳಾದ ಶಶಿಶೇಖರ್, ವಾಹಿದ್ ಅಹ್ಮದ್, ವಿವಿಧ ಇಲಾಖೆ ಅಧಿಕಾರಿಗಳು, ಪಟ್ಟಣ ಪಂಚಾಯಿತಿ ಸದಸ್ಯರು ಉಪಸ್ಥಿತರಿದ್ದರು.

# ದೈವಜ್ಞ ಕ್ರೆಡಿಟ್ ಸೊಸೈಟಿಯಿಂದ ಬೃಹತ್ ಧ್ವಜ ಮೆರವಣಿಗೆ




ದಾವಣಗೆರೆ, ಆ. 15- ನಗರದ ದೈವಜ್ಞ ಕ್ರೆಡಿಟ್ ಕೋ-ಆಪ್ ಸೊಸೈಟಿ ಹಾಗೂ ಹಿತರಕ್ಷಣಾ ವೇದಿಕೆಯಿಂದ 75ನೇ ಸ್ವಾತಂತ್ರ್ಯ ಮಹೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ವಿಶೇಷವಾಗಿ 290 ಅಡಿ ಉದ್ದದ ಧ್ವಜವನ್ನು ತಯಾರಿಸಿ, ನಗರದ ರಾಜ ಬೀದಿಗಳಲ್ಲಿ ಸಂಚರಿಸಿ ಜನತೆಯ ಗಮನ ಸೆಳೆದರು.

ಈ ಸಂದರ್ಭದಲ್ಲಿ ದೈವಜ್ಞ ಕೋ-ಆಪ್ ಸೊಸೈಟಿಯ ಅಧ್ಯಕ್ಷರಾದ ಪ್ರಶಾಂತ್ ವೆರ್ಣೇಕರ್, ಉಪಾಧ್ಯಕ್ಷ ರಾಜೀವ್, ನಿರ್ದೇಶಕರುಗಳಾದ ಗಾಲಿ ಮಂಜಣ್ಣ, ಸತೀಶ್ ಎಸ್. ಸಾನು, ದೀಪಕ್ ಕುರ್ಡೇಕರ್, ರಾಘವೇಂದ್ರ ದಿವಾಕರ್, ರಾಘವೇಂದ್ರ ಕುರ್ಡೇಕರ್, ವಿಜಯಶಂಕರ್ ವಿಠ್ಠಲಕರ್, ಶ್ವೇತಾ, ಗಣೇಶ್ ಶೇಟ್, ಮುಖ್ಯ ಅತಿಥಿಗಳಾಗಿ ದೈವಜ್ಞ ಸಮಾಜದ ಅಧ್ಯಕ್ಷ ಸತ್ಯನಾರಾಯಣ ರಾಯ್ಕರ್ ಹಾಗೂ ಸಿಬ್ಬಂದಿ ವರ್ಗ ಮತ್ತು ದೈವಜ್ಞ ಸಮಾಜ ಬಾಂಧವರು ಉಪಸ್ಥಿತರಿದ್ದರು.

# ಮೂಲ, ಒಮಿಕ್ರಾನ್ ಲಸಿಕೆಗೆ ಬ್ರಿಟನ್ ಒಪ್ಪಿಗೆ

ಲಂಡನ್, ಆ. 15 – ಕೊರೊನಾದ ಮೂಲ ವೈರಸ್ ಹಾಗೂ ಒಮಿಕ್ರಾನ್ ರೂಪಾಂತರಿ ಎರಡನ್ನೂ ಎದುರಿಸುವ ಸಾಮರ್ಥ್ಯ ಹೊಂದಿರುವ ಕೊರೊನಾ ಲಸಿಕೆಗೆ ಬ್ರಿಟನ್ ಒಪ್ಪಿಗೆ ನೀಡಿದೆ. ಈ ರೀತಿಯ ಲಸಿಕೆಗೆ ಒಪ್ಪಿಗೆ ನೀಡಿರುವ ಮೊದಲ ದೇಶ ಬ್ರಿಟನ್ ಆಗಿದೆ. ಮೊಡೆರ್ನಾ ರೂಪಿಸಿರುವ ಲಸಿಕೆಗೆ ಬ್ರಿಟನ್ ಆರೋಗ್ಯ ಪ್ರಾಧಿಕಾರ ಅನುಮತಿ ನೀಡಿದೆ. ಬ್ರಿಟನ್‌ನಲ್ಲಿ ಇದುವರೆಗೂ ಮೊದಲ ಪೀಳಿಗೆಯ ಕೊರೊನಾ ಲಸಿಕೆ ಬಳಸಲಾಗುತ್ತಿತ್ತು.

# ರಾಜ್ಯ ಸಿನಿಮಾ ನಿರ್ಮಾಪಕರ ಸಂಘದ ಅಧ್ಯಕ್ಷರಾಗಿ ಉಮೇಶ್ ಬಣಕಾರ್ ಆಯ್ಕೆ



ಬೆಂಗಳೂರು, ಆ. 15 - ರಾಜ್ಯ ನಿರ್ಮಾಪಕರ ಸಂಘದ ಅಧ್ಯಕ್ಷರಾಗಿ ಉಮೇಶ್ ಬಣಕಾರ್ ಆಯ್ಕೆಯಾಗಿದ್ದಾರೆ. ಬೆಂಗಳೂರಿನಲ್ಲಿ ಇಂದು ನಡೆದ ಸಂಘದ ಚುನಾವಣೆಯಲ್ಲಿ ಅವರು ಅವಿರೋಧ ಆಯ್ಕೆಯಾಗಿದ್ದಾರೆ.

ಮೂಲತಃ ಹಾವೇರಿಯ ಮೋಟೆ ಬೆನ್ನೂರಿನವರಾದ ಬಣಕಾರ್ ಅವರು ಸಾಹಿತಿ ಹಾಗೂ ಪರಿಷತ್ ಮಾಜಿ ಸದಸ್ಯ ದಿ. ಡಾ. ಮಹಾದೇವ್ ಬಣಕಾರ್ ಅವರ ಪುತ್ರ.

ಆಯ್ಕೆ ನಂತರ ಮಾತನಾಡಿರುವ ಬಣಕಾರ್, ಸಿನಿಮಾ ನಿರ್ಮಾಪಕರು ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಶೇ.90ರಷ್ಟು ಚಿತ್ರಗಳು ನೆಲ ಕಚ್ಚುತ್ತಿವೆ. ಯಾವ ಸಮಸ್ಯೆಗಳಿಂದ ಈ ರೀತಿ ಆಗುತ್ತಿದೆ ಎಂಬುದನ್ನು ಗುರುತಿಸಿ ಕ್ರಮ ತೆಗೆದುಕೊಳ್ಳಲು ಆದ್ಯತೆ ನೀಡಲಾಗುವುದು ಎಂದಿದ್ದಾರೆ.

ಹೊರ ರಾಜ್ಯಗಳಲ್ಲಿ ನಿರ್ಮಾಪಕರಿಗೆ ಇರುವ ಅನುಕೂಲಗಳು, ಇಲ್ಲಿನ ನಿರ್ಮಾಪಕರಿಗೂ ದೊರೆಯುವಂತೆ ಮಾಡಲು ಶ್ರಮಿಸುವುದಾಗಿ ಅವರು ತಿಳಿಸಿದ್ದಾರೆ.


ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ ಸಿಟಿ ಶಾಮನೂರು ವಾಸಿ ಸಣ್ಣಗೌಡ್ರ ಶ್ರೀಮತಿ ಗೌರಮ್ಮ ಲೋಕೇಶ್ವರಪ್ಪ
ನಗರಸಭೆ ಮಾಜಿ ಉಪಾಧ್ಯಕ್ಷರು, ದಾವಣಗೆರೆ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು.
ದಿನಾಂಕ 9.8.2022ರ ಮಂಗಳವಾರ ಮಧ್ಯಾಹ್ನ 1.15 ನನ್ನ ಪೂಜ್ಯ ಪತಿಯವರಾದ



ಸಣ್ಣಗೌಡ್ರ ಎಸ್.ಜಿ. ಲೋಕೇಶ್ವರಪ್ಪನವರು
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 17.8.2022ರ ಬುಧವಾರ ಬೆಳಿಗ್ಗೆ 10.30ಕ್ಕೆ
ಶ್ರೀ ಆಂಜನೇಯ ಸ್ವಾಮಿ ಕಲ್ಯಾಣ ಮಂಟಪ, ಶಾಮನೂರು
ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತ ಕುಟುಂಬ ವರ್ಗ :

- ಸಣ್ಣಗೌಡ್ರ ಶ್ರೀಮತಿ ಗೌರಮ್ಮ ಲೋಕೇಶ್ವರಪ್ಪ, ನಗರಸಭೆ ಮಾಜಿ ಉಪಾಧ್ಯಕ್ಷರು, ದಾವಣಗೆರೆ.
- ಶ್ರೀಮತಿ ರೂಪ ಶ್ರೀ ಸುರೇಶ್ ಎಸ್. ಮಾಳಗಿ ಮತ್ತು ಮಕ್ಕಳು, ರಾಣೇಬೆನ್ನೂರು
- ಶ್ರೀಮತಿ ಕವಿತ ಶ್ರೀ ಎಸ್.ಜಿ. ಹನುಮಂತಪ್ಪ ಮತ್ತು ಮಕ್ಕಳು, ಶಾಮನೂರು
- ಶ್ರೀಮತಿ ಕೀರ್ತನ ಶ್ರೀ ವಿನಯ್ ಪಾಟೀಲ್ ಮತ್ತು ಮಕ್ಕಳು, ಬ್ಯಾಡಗಿ
- ಶ್ರೀಮತಿ ಸುನೀತ ಶ್ರೀ ಅವಿನಾಶ್ ಬ್ಯಾಲಹಾಳ್ ಮತ್ತು ಮಕ್ಕಳು, ಧಾರವಾಡ
- ಶ್ರೀಮತಿ ಕವಿತ ಶ್ರೀ ಜಿ.ಟಿ. ನಾಗರಾಜ್ ಮತ್ತು ಮಕ್ಕಳು, ಕತ್ತಲಗೆರೆ
- ಶ್ರೀಮತಿ ಚೇತನ ಶ್ರೀ ಸುನೀಲ್ ಎಸ್. ಜಾಜೂರ್ ಮತ್ತು ಮಕ್ಕಳು, ದಾವಣಗೆರೆ.
- ಶ್ರೀಮತಿ ಆಶಾ ಶ್ರೀ ಜಿ.ಎಲ್. ಮಂಜುನಾಥ್, ಶಾಮನೂರು

ಸಣ್ಣಗೌಡ್ರ ವಂಶಸ್ಥರು, ಶಾಮನೂರು ಹಾಗೂ ಬಂಧು-ಮಿತ್ರರು.

ಶಾಮನೂರು ಶಾಪೆ, ಎಸ್.ಜಿ.ಎಲ್. ಇನ್‌ಫೋಟೆಕ್
ಮೊಬೈಲ್ : 98803 10567, 99644 34834

ವಿ.ಸೂ : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte